4. ಸಂತಾಪ ಸೂಚನೆ:

ವಿಷಯ: ಖ್ಯಾತ ರಂಗಕರ್ಮಿ ಮ್ಯಾಗ್ಸೆಸ್ಸೆ ಹಾಗೂ ಪದ್ಮಶ್ರೀ ಪುರಸ್ಕೃತ ಶ್ರೀ ಕೆ.ವಿ.ಸುಬ್ಬಣ್ಣ ಅವರ ನಿಧನದ ಕುರಿತು.

ಸಭಾಧ್ಯಕ್ಷರು: ಖ್ಯಾತ ರಂಗಕರ್ಮಿ, ಮ್ಯಾಗ್ಸೆಸ್ಸೆ ಹಾಗೂ ಪದ್ಮಶ್ರೀ ಪ್ರಶಸ್ತಿ ಪುರಸ್ಕೃತರಾದ ಶ್ರೀ ಕೆ.ವಿ.ಸುಬ್ಬಣ್ಣ ಅವರು ದಿನಾಂಕ 16.07.2005 ರಂದು ನಿಧನ ಹೊಂದಿರುವುದನ್ನು ಈ ಸದನಕ್ಕೆ ಅತ್ಯಂತ ವಿಷಾದದಿಂದ ತಿಳಿಸಬಯಸುತ್ತೇನೆ.

ಶ್ರೀ ಕುಂಟುಗೋಡು ವಿಭೂತಿ ಸುಬ್ಬಣ್ಣ ಅವರು 1932ರ, ಫೆಬ್ರವರಿ 20ರಂದು ಹೆಗ್ಗೋಡಿನಲ್ಲಿ ಜನಿಸಿದ್ದು, ಕೃಷಿ ಹಾಗೂ ರಂಗಭೂಮಿ ಕಾಯಕದಲ್ಲಿ ನಿರತರಾದರು. ತಮ್ಮ ಊರಿನಲ್ಲಿ ನಿನಾಸಂ ಸಂಸ್ಥೆ ಕಟ್ಟಿ ಅದರ ಮುಖಾಂತರ ರಂಗ ಚಟುವಟಿಕೆಯನ್ನು ವಿಶ್ವ ಮಟ್ಟಕ್ಕೆ ಕೊಂಡೊಯ್ದವರು. 1978ರಲ್ಲಿ ಗ್ರಾಮೀಣ ಚಿತ್ರೋತ್ಸವ ನಡೆಸಿ ವಿಶ್ವದ ಶ್ರೇಷ್ಠ ನಿರ್ದೇಶಕರನ್ನು ಆಹ್ವಾನಿಸಿದ್ದರು. ಸಿನಿಮಾ ಯಂತ್ರಯಾತ್ರೆ, ಪದಕೋಶ ಹಾಗೂ ನಿನಾಸಂ ತಿರುಗಾಟ ರಂಗ ಸಂಸ್ಥೆಗಳನ್ನು ಸ್ಥಾಪಿಸಿ ರಾಜ್ಯಾದ್ಯಂತ ಯುವಜನತೆಯನ್ನು ಕಲೆ, ನಾಟ್ಯ, ಸಂಗೀತ, ಸಾಹಿತ್ಯ ಮತ್ತು ನಾಟಕದತ್ತ ಸೆಳೆದವರು. ಈ ಸಂಸ್ಥೆಯ ಅಡಿಯಲ್ಲಿ "ಗೋವಿನಹಾಡು, ಕೆರೆಗೆಹಾರ, ಅಭಿಜ್ಞಾನ ಶಾಕುಂತಲ, ತಾಯಿ, ಮೂರುಕಾಸಿನ ಸಂಗೀತ ನಾಟಕ, ಸೇಜುವಾನಿ ನಗರದ ಸಾದ್ವೀ, ಸೂಳೆ ಸನ್ಯಾಸಿ ಮತ್ತು ರಂಗದಲ್ಲಿ ಅಂತರಂಗ" ಮುಂತಾದ ರಂಗ ಪ್ರಯೋಗಗಳನ್ನು ಮಾಡಿ ಜನಮನ್ನಣೆ ಪಡೆದಿದ್ದರು. ಇವರ ಕಾರ್ಯವನ್ನು ಗುರುತಿಸಿ ಮ್ಯಾಗ್ಸೆಸ್ಸೆ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಕಾಳಿದಾಸ ಸಮ್ಮಾನ್ ಪ್ರಶಸ್ತಿಯನ್ನು ಮತ್ತು ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್‌ಗಳನ್ನು ನೀಡಲಾಗಿದೆ. ಶ್ರೀಯುತರು ನಾಟಕ ರಂಗದಲ್ಲಿ ಮಾತ್ರವಲ್ಲದೆ ನಾಡಿನ ಹಲವು ಜನಪರ ಚಳವಳಿಯಲ್ಲಿಯೂ ಸಕ್ರಿಯವಾಗಿ ಭಾಗವಹಿಸಿದ್ದವರು.

ಶ್ರೀ ಧರ್ಮಸಿಂಗ್ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಶ್ರೀ ಕುಂಟುಗೋಡು ವಿಭೂತಿ ಸುಬ್ಬಣ್ಣನವರು 1932 ರಲ್ಲಿ ಜನಿಸಿ, ಪ್ರಾರಂಭದಿಂದಲೇ ಕೃಷಿ ಮತ್ತು ರಂಗಭೂಮಿಯಲ್ಲಿ ಬಹಳಷ್ಟು ಆಸಕ್ತಿಯಿಂದ ಕೆಲಸವನ್ನು ಮಾಡಿದ್ದಾರೆ. ಅವರು ತಮ್ಮ ಊರಿನಲ್ಲಿ ಗ್ರಾಮೀಣ ಚಿತ್ರೋತ್ಸವ ಮಾಡುವ ರೀತಿಯಲ್ಲಿ ಬಹಳ ಯಶಸ್ವಿಯಾಗಿ ಕೆಲಸ ಮಾಡಿದ್ದಾರೆ. ಅವರಿಗೆ ಕಲೆ, ನಾಟಕ, ಸಂಗೀತ, ಸಾಹಿತ್ಯ ಮತ್ತು ನಾಟಕದತ್ತ ಆಸಕ್ತಿ ವಹಿಸುವುದರ ಜೊತೆಗೆ ಈ ಕ್ಷೇತ್ರದಲ್ಲಿ ಹೆಚ್ಚಿನ ಅಭಿರುಚಿಯೊಂದಿಗೆ ಈ ಕನ್ನಡ ನಾಡಿಗೆ

ವಿಶೇಷವಾದ ಸೇವೆಯನ್ನು ಸಲ್ಲಿಸಿದ್ದಾರೆ. ಮತ್ತು ಕಲಾ ಜಗತ್ತಿನಲ್ಲಿ ಕೂಡ ತಮ್ಮ ಪ್ರದರ್ಶನದಿಂದ ವಿಶೇಷವಾದ ಗ್ರಾಮೀಣ ಜನತೆಯ ಕೃಷಿಯ ಬಗ್ಗೆ ಹಾಗೂ ಕಲೆಯ ಬಗ್ಗೆ ಬಹಳ ಒಬ್ಬ ದೊಡ್ಡ ಮೇಧಾವಿಯಾಗಿ ಅವರು ಕೆಲಸ ಮಾಡಿದ್ದಾರೆ. ಅವರು ಮಾಡತಕ್ಕಂಥ ಕೆಲಸಕಾರ್ಯಗಳಿಗೆ ಹೆಚ್ಚಿನ ಮೆಚ್ಚುಗೆಪಡಿಸಿ ಮ್ಯಾಗ್ಸೆಸ್ಸೆ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಕಾಳಿದಾಸ ಸಮ್ಮಾನ್ ಪ್ರಶಸ್ತಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ವತಿಯಿಂದಲೂ ಕೂಡ ಅವರಿಗೆ ಪ್ರಶಸ್ತಿ ಪ್ರದಾನ ಮಾಡಿದ್ದಾರೆ. ಇವರು ಖ್ಯಾತರಂಗಕರ್ಮಿ, ಇವರೇನು ನಮ್ಮನ್ನು ಅಗಲಿದ್ದಾರೆ ಇಡೀ ಕರ್ನಾಟಕದ ಜನತೆ ತಮ್ಮ ದು:ಖವನ್ನು ವ್ಯಕ್ತಪಡಿಸಿದ್ದಾರೆ. ಮತ್ತು ಅವರ ಅಗಲಿಕೆಯಿಂದ ಕನ್ನಡದ ಬೆಳವಣಿಗೆಯ ಮೇಲೆ ಪರಿಣಾಮ ಬೀರಿದೆ. ಕನ್ನಡದ ಬೆಳವಣಿಗೆ ಆಗಬೇಕಾದರೆ ಅದಕ್ಕೆ ಇರುವ ಸಾಹಿತಿಗಳ ಮೂಲಕ ಆಗುತ್ತದೆ. ಇವತ್ತು ಅವರು ನಮ್ಮ ಮಧ್ಯೆದಲ್ಲಿ ಇಲ್ಲ. ಇವರಿಗಾಗಿ ನಮ್ಮ ಕನ್ನಡ ನಾಡಿನ ಜನತೆ ತೀವ್ರ ಸಂತಾಪವನ್ನು ವ್ಯಕ್ತ ಮಾಡಿದ್ದಾರೆ. ನಾನು ಕೂಡ ಸದನದಲ್ಲಿ ತಮ್ಮ ಮುಖಾಂತರ ಅವರ ಮನೆಯವರಿಗೆ, ಕುಟುಂಬದವರಿಗೆ, ದೇವರು ಅವರಿಗೆ ಸಹನೆ ಕೊಡಲಿ ಎಂದು ಹೇಳಿ, ಕರ್ನಾಟಕದ ಜನತೆಯ ಪರವಾಗಿ ಅವರಿಗೆ ಶ್ರದ್ಧಾಂಜಲಿಯನ್ನು ತಮ್ಮ ಮೂಲಕ ಅರ್ಪಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧಪಕ್ಷದ ನಾಯಕರು): ಸನ್ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂಥ ನಿರ್ಣಯಕ್ಕೆ ಸಹಮತ ಸೂಚಿಸುತ್ತಾ, ಒಂದು ಕುಗ್ರಾಮದ ಒಬ್ಬ ಕ್ರಾಂತಿ ಪುರುಷನಾಗಿರತಕ್ಕಂಥ ಶ್ರೀ ಕೆ.ವಿ.ಸುಬ್ಬಣ್ಣನವರು ಇಲ್ಲದೇ ಇರುವುದರಿಂದ ಹಗ್ಗೋಡು ಇವತ್ತಿನದಿವಸ ಒಂದು ರೀತಿಯಲ್ಲಿ ತಬ್ಬಲಿಯಾಗಿದೆ. ಸದಾ ರಂಗ ಗೀತೆಗಳನ್ನು ಮತ್ತು ರಂಗ ಪರಿಕರ ಕೇಳುತ್ತಿದ್ದ ಹೆಗ್ಗೋಡು ಇವತ್ತಿನದಿವಸ ಮೌನವಾಗಿ ಶ್ರದ್ಧಾಂಜಲಿ ಅರ್ಪಿಸುತ್ತಿದೆ. ಪರಿಸರ ಪ್ರೇಮಿಗಳ ಮೇಲೆ ಒಂದು ದೊಡ್ಡ ಆಘಾತವೇ ಆಗಿದೆ. ಗ್ರಾಮೀಣದ ಬಗ್ಗೆ ಮತ್ತು ಸಂಗೀತ,ನೃತ್ಯ ಮತ್ತು ಪರಿಸರದ ಬಗ್ಗೆ ಇವತ್ತಿನದಿವಸ ಹೆಚ್ಚು ಕಾಳಜಿ ಹೊಂದಿದಂಥ ಒಬ್ಬ ವ್ಯಕ್ತಿಯನ್ನು ನಾವು ಕಳೆದುಕೊಂಡಿದ್ದೇವೆ. ಯಾವುದೇ ರೀತಿಯ ಒಂದು ಪ್ರಚಾರಕ್ಕೆ ಅಪೇಕ್ಷೆ ಪಡದೆ ಒಂದು ರೀತಿಯ ಮೌನ ಕ್ರಾಂತಿಯನ್ನು ತಮ್ಮ ಜೀವನದಲ್ಲಿ ಅಳವಡಿಸಿಕೊಂಡಿದ್ದರು. ಬಹುಶ: ಅವರ ಕಾರ್ಯವನ್ನು ಗುರುತಿಸಿ ಮ್ಯಾಗ್ಸೆಸ್ಸೆ ಪ್ರಶಸ್ತಿ, ಪದ್ಮಭೂಷಣ ಪ್ರಶಸ್ತಿ, ಕಾಳಿದಾಸ ಸಮ್ಮಾನ್ ಪ್ರಶಸ್ತಿ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿ ಫೆಲೋಶಿಪ್ ನೀಡಲಾಗಿದ್ದರೂ ಕೂಡ ಇವರು

ಬಹಳಷ್ಟು ವಿದ್ವತ್ ಪಡೆದಿದ್ದರು ಎನ್ನತಕ್ಕತಂಥದ್ದು ಅವರನ್ನು ನೋಡಿದಂಥ ಯಾವುದೇ ವ್ಯಕ್ತಿಗೆ ಗೊತ್ತಾಗುತ್ತಿರಲಿಲ್ಲ. ಸರಳ ಸಜ್ಜನಿಕೆಯ ಒಬ್ಬ ವ್ಯಕ್ತಿಯನ್ನು ಕಳೆದುಕೊಂಡಂಥ ಕನ್ನಡ ನಾಡಿನ ಕಲಾ ರಂಗ ಇವತ್ತಿನದಿವಸ ತಬ್ಬಲಿಯಾಗಿದೆ ಎಂದು ನಾನು ಭಾವಿಸಿಕೊಂಡಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಲ್ಲಿ ನಾನು ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ, ಯಾವರೀತಿಯಾಗಿ ಅವರು ಮಾಡಿರತಕ್ಕಂಥ ಕಾರ್ಯವನ್ನು ಬಿಟ್ಟುಹೋಗಿದ್ದಾರೆ ಈ ಒಂದು ನೆನಪಿಗೋಸ್ಕರ ಅಂದರೆ ಅವರ ಕಲಾ ಪ್ರತಿಭೆಗೆ ಮತ್ತು ಅವರ ವಿಚಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಶಿವಮೊಗ್ಗದಲ್ಲಿ ಅವರ ನೆನಪು ಇಟ್ಟುಕೊಳ್ಳುವಂಥ ಒಂದು ಕಾರ್ಯವನ್ನು ತಾವು ಮಾಡಬೇಕೆಂದು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ. ಈ ಒಂದು ನೋವುನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬವರ್ಗದವರಿಗೆ ಭಗವಂತನು ಕೊಡಲೆಂದು ಪ್ರಾರ್ಥನೆ ಮಾಡಿ ನಾನೂ ಸಹ ತಾವು ತಂದಿರತಕ್ಕಂಥ ಸಂತಾಪ ಸೂಚನೆಗೆ ಧ್ವನಿಗೂಡಿಸುತ್ತಾ ನನ್ನ ಪಕ್ಷದ ಪರವಾಗಿ ಅವರ ಆತ್ಮಕ್ಕೆ ಶಾಂತಿ, ನೆಮ್ಮದಿಯನ್ನು ಭಗವಂತನನ್ನು ಕೊಡಲೆಂದು ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಸನ್ಮಾನ್ಯ ಅಧ್ಯಕ್ಷರೆ, ನಮ್ಮ ನಾಡಿನ ಖ್ಯಾತ ರಂಗಕರ್ಮಿ, ಸಾಹಿತ್ಯ ಹಾಗೂ ಸಮಾಜ ಚಿಂತಕರು ಆದಂಥ ಶ್ರೀ ಕೆ.ವಿ.ಸುಬ್ಬಣ್ಣನವರ ಬಗ್ಗೆ ತಾವು ಸಂತಾಪ ಸೂಚನೆಯನ್ನು ಔಚಿತ್ಯಪೂರ್ಣವಾಗಿ ಈ ಸಭೆಯಲ್ಲಿ ಮಂಡಿಸಿದ್ದೀರಿ. ಬಹಳ ವರ್ಷಗಳಿಂದಲೂ ಕೂಡ ಪದ್ಮಶ್ರೀ ಸುಬ್ಬಣ್ಣನವರನ್ನು ನಾನು ವೈಯಕ್ತಿಕವಾಗಿ ಬಲ್ಲೆ. ಸುಬ್ಬಣ್ಣನವರು ಮಹಾರಾಜ ಕಾಲೇಜಿನಲ್ಲಿ ವಿದ್ಯಾರ್ಥಿಗಳು ಆಗಿದ್ದಂಥ ಸಂದರ್ಭದಲ್ಲಿ ಬಾಗಿನ ಎಂಬ ಗ್ರಂಥ ಆವತ್ತಿನ ಪ್ರಾಧ್ಯಾಪಕರಾಗಿದ್ದಂಥ ಶ್ರೀ ಎಸ್.ವಿ.ರಂಗಣ್ಣನವರು ಮತ್ತು ಮಾನ್ಯ ಹಾ.ಮಾ.ನಾಯಕರ ಸಂಪಾದಕತ್ವದಲ್ಲಿ ಬಂದಿತ್ತು. ಬಾಗಿನ ಅಭಿನಂದನ ಗ್ರಂಥ ಅತ್ಯಂತ ಮೌಲಿಕವಾಗಿರತಕ್ಕಂಥ ವಿಚಾರಗಳ ಕುರಿತಾಗಿ ಪ್ರಕಟಿಸಲ್ಪಟ್ಟಿರತಕ್ಕಂಥ ಸಾಹಿತ್ಯ ಲೋಕದಲ್ಲಿಯೇ ಒಂದು ಹೆಸರು ಆಗಿರತಕ್ಕಂಥ ಒಂದು ಅಭಿನಂದನಾ ಗ್ರಂಥವಾಗಿತ್ತು. ಆ ಕಾಲದಲ್ಲಿಯೇ ಅವರು ಒಂದು ಪತ್ರಿಕೆಯನ್ನೂ ಕೂಡ ನಡೆಸುತ್ತಿದ್ದರು. ಸಂಗೀತ, ಸಾಹಿತ್ಯ, ನೃತ್ಯ ಮೊದಲಾದಂಥ ಪ್ರದರ್ಶನ ಕಲೆಗಳ ಬಗ್ಗೆ ಅತ್ಯಂತ ಆಸಕ್ತಿಯನ್ನು ಆ ಕಾಲದಲ್ಲಿಟ್ಟುಕೊಂಡು ಅನಂತರ 1954 ರಲ್ಲಿ ಅವರ ಪಕ್ಕದ ಊರಾದ ಹೆಗ್ಗೋಡಿಗೆ ಹೋಗಿ ಅಲ್ಲಿ ಡಾ:ಶಿವರಾಂ ಕಾರಂತರ

ರಂಗಮಂದಿರವನ್ನು ಅವರು ಕಟ್ಟುತ್ತಾರೆ. ಡಾ:ಶಿವರಾಮಕಾರಂತರವರ ರಂಗಮಂದಿರವೇ ಬಹುಶ: ಗ್ರಾಮೀಣ ಪ್ರದೇಶದಲ್ಲಿ ಅತ್ಯಂತ ಕ್ರಿಯಾಶೀಲವಾಗಿರತಕ್ಕಂಥ ಒಂದು ರಂಗಮಂದಿರವಾಗಿದೆ. ಇಲ್ಲಿಗೆ ಪ್ರತಿಭಾನ್ವಿತ ಹೊಂದಿರತಕ್ಕಂಥ ಪ್ರತಿಯೊಬ್ಬ ಜನರನ್ನು ಕರೆಸುವಂಥ ಮತ್ತು ಒಂದು ಹೋರಾಟ ಮಾಡುವುದರ ಜೊತೆಗೆ ಜನಗಳಿಗೆ ಇಂಥ ಒಂದು ಸದಭಿರುಚಿಯನ್ನು ಏರ್ಪಾಡು ಮಾಡತಕ್ಕಂಥ ಪ್ರಯತ್ನವನ್ನು ಮಾಡಿದಂಥ ಓರ್ವ ಸಾಹಸಿ ಮತ್ತು ಪ್ರತಿಭಾಶಾಲಿ. ಸಾಗರದಿಂದ ಅಥವಾ ಉತ್ತರಕನ್ನಡ ಜಿಲ್ಲೆಯ ಮಂಚಿಕೆರೆಯಿಂದ ಹಿಡಿದು ಇವರ ನಾಟಕ ಪ್ರದರ್ಶನವಾಗುತ್ತದೆಂದರೆ ತೀರ್ಥಹಳ್ಳಿಯ ಮಾನ್ಯ ಆರಗಜ್ಞಾನೇಂದ್ರರವರಿಗೂ ಕೂಡ ಗೊತ್ತಿದೆ. ಏಕೆಂದರೆ, ಅವರೂ ಕೂಡ ವೈಯಕ್ತಿಕವಾಗಿ ಅನೇಕ ಸಲ ಭಾಗವಹಿಸಿದ್ದಾರೆ. ಇಂಥ ಒಂದು ಪ್ರದರ್ಶನವಾಗುತ್ತದೆಂದರೆ ಬಯಲುಸೀಮೆಯಿಂದಲೂ ಕೂಡ ಅವರ ನಾಟಕಗಳ ಪ್ರದರ್ಶನ ನೋಡುವುದಕ್ಕಾಗಿ ಅಲ್ಲಿಗೆ ಹೋಗುತ್ತಿದ್ದೆವು. ಅವರು ಕ್ರಿಯಾಶೀಲವಾಗಿ ಕೇವಲ ರಂಗಮಂದಿರವನ್ನು ಕಟ್ಟಿರತಕ್ಕಂಥದ್ದು ಒಂದೇ ಅಲ್ಲ, ಆ ಕಾಲದಲ್ಲಿಯೇ ಅಕ್ಷರ ಪ್ರಕಾಶನ ಎನ್ನತಕ್ಕಂಥ ಒಂದು ಪ್ರತಿಷ್ಟವಾದಂಥ ಪ್ರಕಾಶನ ಸಂಸ್ಥೆಯನ್ನು ಮಾಡಿ ಅತ್ಯಂತ ಮೌಲಿಕವಾಗಿರತಕ್ಕಂಥ ಪುಸ್ತಕಗಳನ್ನು, ಅಂದರೆ ಶ್ರೀರಂಗರವರು ನಾಟ್ಯ ಶಾಸ್ತ್ರದ ಬಗ್ಗೆ ಬರೆದಿರತಕ್ಕಂಥ ಅಂದರೆ, ಸಂಸ್ಕೃತದಲ್ಲಿ ಬರೆದಿರತಕ್ಕಂಥ ಭರತನ ನಾಟ್ಯ ಶಾಸ್ತ್ರವನ್ನು ಕನ್ನಡಕ್ಕೆ ತರ್ಜುಮೆ ಮಾಡಿಸಿ ಆ ಕಾಲದಲ್ಲಿಯೇ ಇವರು ಪ್ರಕಟಿಸಿದ್ದರು. ಅದೇ ರೀತಿಯಾಗಿ ಜೆನ್‌ಗುರುಗಳಿಗೆ ಸಂಬಂಧಪಟ್ಟಿರತಕ್ಕಂಥ ವಿಷಯಗಳನ್ನು ಶ್ರೀ ಡಿ.ಆರ್. ನಾಗರಾಜ್ ಮತ್ತು ಮಾನ್ಯ ಅನಂತಮೂರ್ತಿ, ಇಂಥವರ ಜೊತೆಯಲ್ಲಿ ಚರ್ಚೆ ಮಾಡಿ ಆ ಪುಸ್ತಕಕ್ಕೆ ಸಂಬಂಧಪಟ್ಟಂಥ ಪುಸ್ತಕಗಳ ಸೀರಿಸ್ ಅನ್ನು ಪ್ರಕಟ ಮಾಡಿದರು. ಮಾನ್ಯ ಶಿವರಾಮ ಕಾರಂತರ ಜೊತೆಯಲ್ಲಿ ಸೇರಿ ಜೀವಸಂಕುಲ, ಕಾಡಿನ ವಿಚಾರಗಳು ಪರಿಸರದ ಸಂರಕ್ಷಣೆಗೆ ಸಂಬಂಧಪಟ್ಟಂಥ ವಿಚಾರಗಳು ಅಂದರೆ, ವೈಜ್ಞಾನಿಕವಾದಂಥ, ಸಾಹಿತ್ಯ ಪರವಾಗಿರತಕ್ಕಂಥ ಮತ್ತು ಮೌಲಿಕವಾಗಿರತಕ್ಕಂಥ ಜೀವನದರ್ಶನವನ್ನು ಶ್ರೀಮಂತಗೊಳಿಸುವಂಥ ಅನೇಕ ಪುಸ್ತಕಗಳನ್ನು ಪ್ರಕಟ ಮಾಡತಕ್ಕಂಥ ಕೆಲಸವನ್ನು ಕೈಗೊಂಡು, ಇದರಲ್ಲಿ ಅವರು ಆರ್ಥಿಕ ಮುಗ್ಗಟ್ಟನ್ನು ಕೂಡ ಎದುರಿಸಿದರು. ಆದರೂ ಕೂಡ ಎದೆಗುಂದದ ರೀತಿಯಲ್ಲಿ ಅದನ್ನು ಒಂದು ವ್ಯವಹಾರಿಕ ಸಂಸ್ಥೆ

ಎಂದು ಹೇಳುವುದಕ್ಕಿಂತ ಹೆಚ್ಚಾಗಿ ಒಂದು ಪ್ರತಿಷ್ಟವಾದ ಜನ ಉಪಯೋಗಿ ಆಗಿರತಕ್ಕಂಥ ಮತ್ತು ಜನಕ್ಕೆ ಅನುಕೂಲವಾಗುವಂಥ ರೀತಿಯ ಸಾಮಾಜಿಕ, ಸಾಂಸ್ಕೃತಿಕ ಚಿಂತನೆಗೆ ಎಡೆಮಾಡಿಕೊಡುವಂಥ ರೀತಿಯಲ್ಲಿ, ಶ್ರೀ ಮುರಾರಿ ಬಲ್ಲಾಳ್ ಅಂಥವರು, ಶ್ರೀ. ಟಿ.ಪಿ. ಅಶೋಕ್‌ನಂಥವರೆಲ್ಲರನ್ನೂ ಕರೆಸಿ ಮಾತನಾಡತಕ್ಕಂಥ ಕೆಲಸ ಮಾಡುತ್ತಿದ್ದರು. ಇದರ ಜೊತೆಗೆ ಮುಂದೆ ಬರುತ್ತಾ ಬರುತ್ತಾ ಅವರು ಸುಮಾರು 10 ದಿವಸಗಳ ಕಾಲ ಸಾಂಸ್ಕೃತಿಕ ಸಂಘಟನೆಯ ಮೂಲಕವಾಗಿ ಒಂದು ಶಿಬಿರವನ್ನು ಏರ್ಪಾಡು ಮಾಡುತ್ತಿದ್ದರು. ಆ ಸಾಂಸ್ಕೃತಿಕ ಶಿಬಿರದಲ್ಲಿ ನಿಮಗೆ ಗೊತ್ತಿರುವಂತೆ ಭೂಪಾಲ್‌ನಲ್ಲಿ ಭಾರತ ಮಂಡಲವನ್ನು ಮಾಡಿದಂಥ ವಾಜಪೇಯಿರವರಿಂದ ಹಿಡಿದು ಅಂದರೆ, ನಮ್ಮ ಮಂತ್ರಿಗಳು ಅಲ್ಲ. ಒಬ್ಬ ಐ.ಎ.ಎಸ್. ಅಧಿಕಾರಿ ಈ ವಿಚಾರದಲ್ಲಿ ಬಹಳ ಪರಿಣಿತರಾಗಿರತಕ್ಕಂಥವರು ಮತ್ತೆ ಇದೇ ರೀತಿಯಾಗಿ ಚಂದಾವರ್ಕರ್‌ರವರು ವಿಶೇಷವಾಗಿ ಸಂಗೀತದಲ್ಲಿ ತಜ್ಞರಾಗಿದ್ದರು. ಈ ಚಂದಾವರ್ಕರ್‌ರವರ ಮನೆತನದವರು ನಮ್ಮ ಧಾರವಾಡಕ್ಕೆ ಸೇರಿದವರು. ಇವರ ಕುಟುಂಬದವರೆಲ್ಲಾ ಸಂಗೀತ ಹಾಡುತ್ತಿದ್ದು ತಮಗೆಲ್ಲ ಗೊತ್ತಿರತಕ್ಕಂಥ ವಿಷಯವಾಗಿದೆ. ನಿಶಬ್ದವೇ ಅತ್ಯಂಥ ಉತ್ಕೃಷ್ಟವಾದಂಥ ಸಂಗೀತ ಎಂದು ಪ್ರತಿಪಾದನೆ ಮಾಡಿದಂಥ ಮಾನ್ಯ ವಾಜಪೇಯಿರವರಂಥವರನ್ನು ಕರೆಸಿ, ಸಾಂಸ್ಕೃತಿಕ ಶಿಬಿರ 10 ದಿವಸ ನಡೆಯತಕ್ಕಂಥ ಕಾಲದಲ್ಲಿ ಊಟ ಮತ್ತು ವಸತಿ ಸೌಕರ್ಯವನ್ನು ಕಲ್ಪಿಸಿ ಪ್ರತಿ ವರ್ಷ ಕೂಡ ರಾಷ್ಟ್ರೀಯ ಹಾಗೂ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆದಿರತಕ್ಕಂಥ ಜನರನ್ನು ಕರೆಸಿ ಅಲ್ಲಿ ವಿಚಾರಗಳನ್ನು ಚರ್ಚೆ ಮಾಡತಕ್ಕಂಥ ಮತ್ತು ಅದರ ಬಗ್ಗೆ ಮಾತುಕತೆ ಮಾಡತಕ್ಕಂಥ, ಸಂವಾದ ಮಾಡತಕ್ಕಂಥ ಒಂದು ಕೆಲಸವನ್ನು ಮಾಡುತ್ತಿದ್ದರು, ಹಾಗೆಯೇ ಪ್ರತಿಭಾನ್ವಿತರಾಗಿರತಕ್ಕಂಥ ಮತ್ತು ಡಾ:ಕಂಬಾರ್ ಮೊದಲಾಗಿರುವಂಥ ಹಿರಿಯ ನಾಟಕಕಾರರನ್ನು ನೋಡಿದಾಗ, ಇತ್ತೀಚಿನ ದಿನಮಾನಗಳಲ್ಲಿ, 70ರ ದಶಕದ ನಂತರ ಉತ್ತಮವಾದಂಥ ನಾಟಕಗಳು ಬರುತ್ತಿಲ್ಲ ಎನ್ನುವಂಥ ಮಾತು ಇದೆ. ಆಗ ಮಾನ್ಯ ಲಂಕೇಶ್‌ರವರು, ಡಾ:ಕಂಬಾರ್‌ರವರು ಮತ್ತು ಮಾನ್ಯ ಗಿರೀಶ್ ಕಾರ್ನಾಡ್‌ರವರ ಒಳ್ಳೆಯ ನಾಟಕಗಳಾದ ಅಂತಿಗೊನೆ, ಸಂಕ್ರಾಂತಿ ಆಗಿರಬಹುದು ಮತ್ತು ಈಡಿಪಸ್ ಆಗಿರಬಹುದು. ಈ ಎಲ್ಲಾ ನಾಟಕಗಳು ಪ್ರದರ್ಶನವಾಗುತ್ತಿತ್ತು. ಆದರೆ, ಇತ್ತೀಚಿನ ದಿನಮಾನಗಳಲ್ಲಿ ಕಾದಂಬರಿಗಳನ್ನು ರೂಪಾಂತರಗೊಳಿಸಿ ನಾಟಕ ಆಗುತ್ತಾ ಇದೆ. ಆದ್ದರಿಂದ, ನೀವು ನಾಟಕಗಳನ್ನು ಬರೆದು ಕೊಡಬೇಕೆಂದು

ಹೇಳಿ ಈ ಎಲ್ಲಾ ಹಿರಿಯರನ್ನು ಆಹ್ವಾನಿಸಿ ಇವರಿಗೆಲ್ಲಾ ತಮ್ಮ ಹೆಗ್ಗೋಡಿನಲ್ಲಿ ವಾಸ್ತವ್ಯ ಕಲ್ಪಿಸಿಕೊಟ್ಟು ಅವರ ಮೂಲಕವಾಗಿ ನಾಟಕವನ್ನು ಬರೆಸುವಂಥ ಮತ್ತು ಇದನ್ನು ಪ್ರದರ್ಶನ ಮಾಡತಕ್ಕಂಥ ಪ್ರಯತ್ನವನ್ನು ಇವರು ಮಾಡುತ್ತಿದ್ದರು. ಮತ್ತೆ ಇದರ ಜೊತೆಗೆ ತಿರುಗಾಟ ಎನ್ನತಕ್ಕಂಥ ಒಂದು ಹೊಸ ರೆಪರ್ಟರಿಯನ್ನು ತಯಾರು ಮಾಡಿದರು. ಅಲ್ಲಿ ನಾಟಕ ಶಾಲೆಯನ್ನು ಪ್ರಾರಂಭ ಮಾಡಿ ಒಂದು ಮತ್ತು 2 ವರ್ಷದ ಡಿಪ್ಲೋಮ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದರು. ಯಾರ್‍ಯಾರು ಇದರಲ್ಲಿ ಪರಿಣತರಾಗಿರುತ್ತಾರೆ ಅವರೆಲ್ಲರಿಗೂ ಕೂಡ ಅಂದರೆ ಗ್ರಾಮೀಣ ಮಕ್ಕಳು ಇದರಲ್ಲಿ ಆಸಕ್ತಿ ಇರತಕ್ಕಂಥ ಎಲ್ಲರಿಗೂ ಕೂಡ ರಂಗ ಸಜ್ಜಿಕೆ ಮತ್ತು ಪ್ರಸಾದನ ಕರೆ, ಮುಖವಾಡಗಳು, ಕಾರ್ಪೆಂಟರಿ ವಿಭಾಗ, ಇಂಥ ಎಲ್ಲಾ ವಿಚಾರಗಳ ಬಗ್ಗೆ ಮಾಹಿತಿಗಳನ್ನು ಕೊಟ್ಟು ಇದರ ಮೂಲಕವಾಗಿ ರಂಗಾಯಣ ಅಂತರರಾಷ್ಟ್ರೀಯ ಖ್ಯಾತಿಯನ್ನು ಪಡೆಯತಕ್ಕಂಥ ರೀತಿಯಲ್ಲಿ ತಯಾರಾಗುತ್ತಿತ್ತು. ಇದು ಆದಮೇಲೆ ತಿರುಗಾಟ ಎಂಬ ರೀತಿಯ ಕಾರ್ಯಕ್ರಮವನ್ನು ಮಾಡಿ, ನೀವೆಲ್ಲಾ ಹೊಸ ನಮೂನೆಯ ಪ್ರಯೋಗಾತ್ಮಕವಾದಂಥ ನಾಟಕವನ್ನು ಮಾಡುತ್ತಿದ್ದೀರಿ, ವೃತ್ತಿಪರವಾದಂಥ ರಂಗಭೂಮಿಗೆ ಇರತಕ್ಕಂಥ ಕಷ್ಟವನ್ನು ನೀವು ಅನುಭವಿಸುತ್ತಿಲ್ಲ, ಬೇರೆ ಬೇರೆ ಹಳ್ಳಿಗಳಲ್ಲಿರತಕ್ಕಂಥ ಜನರಿಗೆ ಇದು ಪ್ರೇರೇಪಣೆ ಆಗಬೇಕಾಗುತ್ತದೆ, ನೀವು ಇದರಿಂದ ಹಣ ಗಳಿಸುವುದಿಲ್ಲ, ಬೇರೆಯವರ ಹಣದ ಮೂಲಕ ಇಂಥ ಪ್ರಯೋಗಗಳನ್ನು ಮಾಡುತ್ತೀರಿ ಎನ್ನತಕ್ಕಂಥ ಟೀಕೆಗೆ ಉತ್ತರವಾಗಿ ತಿರುಗಾಟ ಎನ್ನತಕ್ಕಂಥ ಒಂದು ಕಲ್ಪನೆಯನ್ನು ಮಾಡಿ ಅದರ ಮೂಲಕ ರಂಗತಂಡವನ್ನು ಕಟ್ಟಿ ಬೀದರ್‌ನಿಂದ ಹಿಡಿದು ಕೊಳ್ಳೆಗಾಲದವರೆಗೆ ಇರತಕ್ಕಂಥ ಪ್ರತಿ ಜಿಲ್ಲೆಗಳಲ್ಲಿ ಈ ತಿರುಗಾಟದ ಮೂರು ದಿವಸದ ಕಾರ್ಯಕ್ರಮಗಳನ್ನು ಮಾಡಿಸಿ, ಈ ಮೂರು ದಿವಸಗಳಲ್ಲಿ ಕೂಡ ಹೊಸ ಹೊಸ ನಾಟಕಗಳನ್ನು ಪ್ರದರ್ಶನ ಮಾಡುತ್ತಿದ್ದರು. ಅದರಲ್ಲಿ ಸಫೋಕ್ರೋಸಿನ ನಾಟಕ ಇರಬಹುದು, ಅಥವಾ ಶೇಕ್ಸ್‌ಪಿಯರ್‌ನ ಮಿಡ್ ಸಮ್ಮರ್‌ನಂಥ ನಾಟಕ ಇರಬಹುದು, ಹ್ಯಾಮ್‌ಲೆಟ್‌ನಂಥ ನಾಟಕ ಇರಬಹುದು. ಇದರಲ್ಲಿ ಮರ್ಚೆಂಟ್ ಆಫ್ ವೆನಿಸ್ ಎಂಬ ನಾಟಕವನ್ನು ಇವರೇ ಸ್ವತ: ತರ್ಜುಮೆ ಮಾಡಿ ಅದರಲ್ಲಿ ಭಾಸನ ಸಂಸ್ಕೃತ ನಾಟಕಗಳನ್ನು ಅಂದರೆ, ಸೂರ್ಯೋದಯದಿಂದ ಹಿಡಿದು ಸೂರ್ಯಾಸ್ತದವರೆಗಿನ ವಿಚಾರದವರೆಗೆ ನಾಟಕಗಳೆಲ್ಲವನ್ನೂ ಸ್ವತ: ಇವರೇ ಯಕ್ಷಗಾನ ಶೈಲಿಯಲ್ಲಿ ಕೆಲಸ

ಮಾಡತಕ್ಕಂಥ ಒಂದು ಕೆಲಸವನ್ನು ಮಾಡಿ ಸಾಂಸ್ಕೃತಿಕವಾಗಿ ಕನ್ನಡ ನಾಡನ್ನು ಶ್ರೀಮಂತಗೊಳಿಸಿರತಕ್ಕಂಥ ಒಬ್ಬ ಧೀಮಂತ ವ್ಯಕ್ತಿ. ಇಷ್ಟಕ್ಕೇ ಅವರು ಸೀಮಿತವಾಗಲಿಲ್ಲ. ಅವರು ಡಾ: ರಾಮ್‌ಮನೋಹರ್ ಲೋಹಿಯರವರ ಪರಮ ಆಪ್ತರಾಗಿದ್ದರು. ಅವರ ಚಿಂತನೆಯ ಬಗ್ಗೆ ಬಹಳ ಗಂಭೀರವಾದಂಥ ಬದ್ದತೆಯನ್ನು ಇಟ್ಟುಕೊಂಡಿರುವವರಾಗಿದ್ದರು. ಮಾನ್ಯ ಅನಂತ ಮೂರ್ತಿಯವರು ಮತ್ತು ಮಾನ್ಯ ಜೆ.ಎಚ್. ಪಟೇಲ್‌ರವರಂಥವರ ಜೊತೆಯಲ್ಲಿ ಕೂಡ ಅವರು ಮಹಾರಾಜ ಕಾಲೇಜಿನಲ್ಲಿ ಓದುತ್ತಿದ್ದಂಥ ಸಂದರ್ಭದಲ್ಲಿ ಇವರ ಸ್ನೇಹ ಮತ್ತು ಸಹಕಾರಕ್ಕೆ ಬಂದಿದ್ದರಿಂದ ಅವರು ಅನೇಕ ಬಾರಿ ಇಂಥ ಸಾರ್ವಜನಿಕ ಮಹತ್ವವಾದ ವಿಚಾರಗಳ ಬಗ್ಗೆ ಚಳವಳಿಗಾರರೂ ಕೂಡ ಆಗಿದ್ದರು. ಇವರು ಸ್ವತ: ಅಡಿಕೆ ಬೆಳೆಗಾರರಾಗಿದ್ದರು. ಅಡಿಕೆ ಬೆಳೆಗಾರರಾಗಿ ಹಿಂದೆ ಗುಟುಕಾ ದೊರೆಗಳಾಗಿರತಕ್ಕಂತಹವರು ಈಗ ಏನು ಭೂಗತದೊರೆಗಳ ಜೊತೆಗೆ ಸಂಬಂಧವನ್ನು ಇಟ್ಟುಕೊಂಡಿದ್ದಾರೆನ್ನುವಂತಹವರು ಇದ್ದಾರೆ, ಇವರ ಮಾಣಿಕ್‌ಚಂದ್ ಎಂಬುವವರನ್ನು ಕರೆಸಿ ಶಿವಮೊಗ್ಗದಲ್ಲಿ ಸನ್ಮಾನ ಮಾಡುವಂತಹ ಕಾರ್ಯಕ್ರಮವಾಯಿತು. ಅಡಿಕೆಬೆಳೆಗಾರರು ಮತ್ತು ಅಡಿಕೆಯ ಮಾರಾಟಗಾರರು ಯಾರು ಇದ್ದರು ಅವರೆಲ್ಲರೂ ಮಾಡಿರುವಂತಹ ಸಂದರ್ಭದಲ್ಲಿ ಅಡಿಕೆಯ ವಿಚಾರದಲ್ಲಿ ಇದು ಒಂದು ಗೌರವಯುತವಾದಂತಹ ಸಾಂಸ್ಕೃತಿಕ ವಿನಿಮಯವಾಗುವಂತಹದ್ದು ನಾವು ಯಾರಾದರೂ ವೀಳ್ಯ ಕೊಡತಕ್ಕಂಥದ್ದು ಎಂದರೆ ಎಲೆ ಮತ್ತು ಅಡಿಕೆಯನ್ನು ಇಟ್ಟು ವೀಳ್ಯವನ್ನು ಕೊಡುತ್ತೇವೆ. ಯುದ್ಧಕ್ಕೆ ಹೋಗುವಾಗಲೂ ಕೂಡ ದಂಡನಾಯಕರಿಗೆ ವೀಳ್ಯೆಯನ್ನು ಕೊಡತಕ್ಕಂಥಹದ್ದರಲ್ಲಿ ಅಡಿಕೆ ಬಹಳ ಮುಖ್ಯ ಅಥವಾ ಯಾವುದಾದರೂ ನಿಶ್ಚಿತಾರ್ಥ ಕಾರ್ಯ ಅಥವಾ ಮಂಗಳಕಾರ್ಯ ಇಂತಹ ಸಂದರ್ಭಗಳಲ್ಲಿ ವೀಳ್ಯೆ ಮತ್ತು ಅಡಿಕೆಯ ಸಾಂಸ್ಕೃತಿಕ ವಿಚಾರಗಳನ್ನು ಬರೆಯುತ್ತಾ ಗುಟುಕಾದ ಬಗ್ಗೆ ವಿರೋಧ ಮಾಡಿರತಕ್ಕಂತಹ ಒಬ್ಬ ಬೆಳೆಗಾರ ಎಂದರೆ ಶ್ರೀ ಕೆ.ವಿ. ಸುಬ್ಬಣ್ಣನವರು. ಇದರಿಂದ ಹಾನಿಯಾಗುತ್ತದೆ, ಕ್ಯಾನ್ಸರ್‌ಗೆ ಅವಕಾಶವಾಗುತ್ತದೆ ಎಂಬ ಕಾರಣವಿರುವುದರಿಂದ ಮಾಣಿಕ್‌ಚಂದ್‌ರವರನ್ನು ಕರೆಸಿ ಸನ್ಮಾನ ಮಾಡುವುದಕ್ಕೆ ನನ್ನ ವಿರೋಧವಿದೆ ಎಂಬುದನ್ನು ಮಾಡಿದರು. ಪ್ರತಿಯೊಂದು ಸಂದರ್ಭದಲ್ಲಿಯೂ ಕೂಡ ಅದು ನೀತಿಗೆ ಸಂಬಂದಪಟ್ಟಿದ್ದು ಆಗಿರಬಹುದು. ಸಾಂಸ್ಕೃತಿಕ ನೀತಿಗೆ ಸಂಬಂಧಪಡುವಂತಹ ವಿಚಾರಗಳು

ಆಗಿರಬಹುದು. ಇಂತಹ ಜನ ಪರವಾಗಿರುವಂತಹ ಸಂದರ್ಭ ಬಂದಾಗ ಭಾಷೆ, ನೆಲ,ಜಲ, ಈ ವಿಚಾರದಲ್ಲಿ ಬಂದಾಗ ಅವರು ಲೇಖನಗಳನ್ನು ಬರೆಯುತ್ತಿದ್ದರು, ತಮ್ಮದೇ ಆದಂತಹ ಇನ್ನಿತರ ವಿಚಾರಗಳಲ್ಲಿ ಚಳವಳಿಗಳನ್ನು ಮಾಡುತ್ತಿದ್ದರು. ಯಾರು ಪ್ರಗತಿಪರರಾಗಿದ್ದಾರೋ ಅಂತಹವರನ್ನು ಚುನಾಯಿಸಿರಿ ಎಂಬ ವಿಚಾರಗಳಲ್ಲಿಯೂ ಕೂಡ ಅವರು ದೊಡ್ಡ ಕೆಲಸಗಳನ್ನು ಮಾಡುತ್ತಿದ್ದರು. ಪ್ರಸನ್ನರವರನ್ನೂ ಕೂಡ ಕರೆಸಿ ಅವರಿಗೆ ಅಲ್ಲಿ ಕವಿಕಾವ್ಯ ಟ್ರಸ್ಟ್ ಮಾಡತಕ್ಕಂಥದ್ದು ಆಗಿತ್ತು. ಪ್ರಸನ್ನರವರು ಅಲ್ಲಿ ಫರ್ನಿಚರ್ಸ್ ಮಾಡುತ್ತಾರೆ, ಈಗ ದೇಶಿ ಎಂಬ ಸಂಸ್ಥೆಯನ್ನು ಮಾಡಿ ದೇಶೀಯ ಸಂಸ್ಕೃತಿಯನ್ನು ಉಡುಪನ್ನು ಇವನ್ನು ಬೆಳೆಸತಕ್ಕಂತಹ ಕೆಲಸ ಕಾರ್ಯಗಳನ್ನು ಮಾಡತಕ್ಕಂಥಹ ರೀತಿಯಲ್ಲಿ ಮಾಡಿದರು. ಮ್ಯಾಗ್ಸೆಸ್ ಅವಾರ್ಡ್ ಫಿಲಿಫೈನ್ಸ್ ದೇಶದವರಿಂದ ಆ ಕಾಲದಲ್ಲಿ ಇವರಿಗೆ 17,500 ಲಕ್ಷ ರೂಪಾಯಿಗಳು ಬಂತು. ಆ ಹಣವನ್ನು ರಂಗಮಂದಿರದ ಚಟುವಟಿಕೆಗಳಿಗೆ ಆಗಲಿ ಎಂದು ವೈಯಕ್ತಿಕವಾಗಿ ಆ ಹಣವನ್ನು ಅವರಿಗೆ ಸಂದದ್ದನ್ನು ಅದಕ್ಕಾಗಿ ಮೀಸಲಾಗಿಟ್ಟಿರುವಂತಹ ಒಬ್ಬ ಅತ್ಯಂತ ಸಾಮಾಜಿಕ ಕಳಕಳಿಯ, ಸಾಂಸ್ಕೃತಿಕ ಕಳಕಳಿಯ ಹಿರಿಯ ಜೀವಿ ಮಾನ್ಯ ಕೆ.ವಿ.ಸುಬ್ಬಣ್ಣನವರಾಗಿದ್ದರು. ಹೀಗೆ ಅವರು ಇತ್ತೀಚಿನ ದಿನಮಾನಗಳಲ್ಲಿ ಅನೇಕ ಅಮೂಲ್ಯವಾದಂತಹ ವಿಚಾರಗಳ ಬಗ್ಗೆ ಪ್ರಸ್ತಾಪವಾಗಬೇಕೆಂದು ಅವರು ಎರಡು ತಿಂಗಳಿಗೆ ಒಂದು ಸಂದರ್ಭದಲ್ಲಿ ಪ್ರಕಟಣೆಯಾಗತಕ್ಕಂತಹ "ಮಾತುಕತೆ" ಎನ್ನುವಂತಹ ಅದು ಖಾಸಗಿ ಪ್ರಚಾರಕ್ಕೆಂದು ನಿಯತಕಾಲಿಕವಾಗಿ ಪ್ರಕಟಿಸಿದ್ದರು. ಆ ಮಾತುಕತೆಯಲ್ಲಿ ಅತ್ಯಂತ ಉತ್ಕೃಷ್ಟವಾಗಿರುವಂತಹ ಲೇಖನಗಳು ಬರುತ್ತಿದ್ದವು. ಈ ರೀತಿಯಾಗಿ ಒಂದು ಗ್ರಾಮೀಣ ಪ್ರದೇಶದಲ್ಲಿ ರಂಗಚಟುವಟಿಕೆಗಳನ್ನು ಪ್ರಾರಂಭಮಾಡಿದಂತಹ ಈ ಹರಿಕಾರರಿಂದ ಕರ್ನಾಟಕ ರಾಜ್ಯವೂ ಕೂಡ ಪ್ರೇರೇಪಿತವಾಗಿ ಬಿ.ವಿ.ಕಾರಂತರವರು ಇಲ್ಲಿಗೆ ಬಂದಂತಹ ಸಂದರ್ಭದಲ್ಲಿ ಮೈಸೂರಿನಲ್ಲಿ "ರಂಗಾಯಣ" ಎಂಬುದನ್ನು ಮಾಡಿ ರೆಪಾರ್ಟರಿಯನ್ನು ಮಾಡಿದ್ದೇವೆ. ಭಾರತ ದೇಶದಲ್ಲಿ ಅಲ್ಲಿ ಮಧ್ಯಪ್ರದೇಶದಲ್ಲಿ ಒಂದು ರೆಪಾರ್ಟರಿಯಿತ್ತು. ಅದು ಈಗ ಮುಚ್ಚಿಹೋಗಿದೆ,ಆದರೆ ಕರ್ನಾಟಕದಲ್ಲಿರುವಂತಹ ರಂಗಾಯಣ ರೆಪಾರ್ಟರಿ ಮಾತ್ರ ಇವತ್ತು ಇಡೀ ಭಾರತದೇಶದಲ್ಲಿ ಒಂದು ಸಾಂಸ್ಕೃತಿಕ ನಾಟಕ ತಂಡವನ್ನು ಕಟ್ಟಿರುವಂತಹ ಹೆಗ್ಗಳಿಕೆ ಕರ್ನಾಟಕ ರಾಜ್ಯಕ್ಕೆ ಮತ್ತು ಕರ್ನಾಟಕ ಸರ್ಕಾರಕ್ಕೆ ಸಲ್ಲಬೇಕಾಗಿರುವಂತಹ ಹೆಗ್ಗಳಿಕೆ ಮತ್ತು ಗೌರವ ಇದಕ್ಕೆ

ಪ್ರೇರೇಪಣೆ ಕೊಟ್ಟಿರುವಂತಹವರು ಮಾನ್ಯ ಸುಬ್ಬಣ್ಣನವರು. ಹಾಗೆಯೇ ಸಾಣಿಯಾಡ್ಯದಲ್ಲಿರುವಂತಹ ಗುರುಗಳಾಗಿರುವಂತಹ ಪಂಡಿತರಾಧ್ಯ ಶಿವಾಚಾರ್ಯಸ್ವಾಮಿಗಳು ಕೂಡ ಅವರು ಅಲ್ಲಿ ಇಂಥಹದೇ ಒಂದು ಸಂಸ್ಥೆಯನ್ನು ಕಟ್ಟಿ ಶಿವಕುಮಾರ ನಾಟ್ಯಸಂಘ ಎಂದು ಮಾಡಿ ಅಲ್ಲಿ ಒಂದು ರಂಗಮಂದಿರದ ಚಟುವಟಿಕೆಗಳನ್ನು ಪ್ರಾರಂಭ ಮಾಡಿ ಅವರೂ ಕೂಡ ತಿರುಗಾಟದ ಕಾರ್ಯಕ್ರಮಗಳನ್ನು ಈಗಾಗಲೇ ರೂಪಿಸಿ ಕಳೆದ 5–6 ವರ್ಷಗಳಿಂದ ಇಂತಹ ಒಂದು ಕೆಲಸವನ್ನು ಮಾಡಿದ್ದಾರೆ. ಮೊನ್ನೆ ನಾನು ಶಿವಮೊಗ್ಗ ಚುನಾವಣೆಯ ಸಂದರ್ಭದಲ್ಲಿ ಅವರು ಯಾವುದೇ ಚುನಾವಣೆಯಲ್ಲಿ ಭಾಗವಹಿಸದೆ ಇದ್ದರೂ ಕೂಡ ಹೆಗ್ಗೋಡಿಗೆ ಹೋಗಿ ಅವರ ಹತ್ತಿರ ವೈಯಕ್ತಿಕವಾಗಿ ಮಾತನಾಡಿ ಅವರು ಬರೆದಿರುವಂತಹ ಇತ್ತೀಚಿನ ಪುಸ್ತಕಗಳನ್ನು ತೆಗೆದುಕೊಂಡು ಬಂದಿದ್ದೇನೆ. ಆದರೆ ಅವರ ಮಗನಾದ ಅಕ್ಷರನ ಜೊತೆಯಲ್ಲಿ ಮಾತನಾಡುತ್ತಾ ಹೃದಯಬೇನೆಗೆ ಒಳಗಾಗಿ ಅವರ ಅಕಾಲಿಕ ನಿಧನರಾದರು. ಅವರ ಅಕಾಲಿಕ ನಿಧನದಿಂದ ನಮ್ಮ ಸಾಂಸ್ಕೃತಿಕ ರಂಗಕ್ಕೆ ಮತ್ತು ಚಿಂತನಾಶೀಲ ಹೋರಾಟಗಾರರ ಈ ವಲಯಕ್ಕೆ ತುಂಬಾರದಂತಹ ನಷ್ಟವಾಗಿದೆ. ಅದಕ್ಕೆ ಈ ಸದನ ಅಂತಹ ಹಿರಿಯ ಜೀವಿಗಳಿಗೆ ಶ್ರದ್ಧಾಂಜಲಿಯನ್ನು ಅರ್ಪಿಸುವುದಕ್ಕೆ ತಂದಿರುವಂತಹ ಸಂತಾಪಸೂಚನೆಗೆ ನಾನು ಸಂಪೂರ್ಣವಾದಂತಹ ಬೆಂಬಲವನ್ನು ಕೊಟ್ಟು ಅವರ ಕುಟುಂಬಕ್ಕೆ ಈ ಒಂದು ಶಕ್ತಿಯನ್ನು ಕೊಡಬೇಕೆಂದು ಹೇಳುತ್ತಾ ಎಲ್ಲಾ ಆಸಕ್ತರಾದಂತಹವರು ಈ ಸಾಂಸ್ಕೃತಿಕ ಚಳವಳಿಯನ್ನು ಮಾಡುವುದರ ಮೂಲಕವಾಗಿ ಕರ್ನಾಟಕವನ್ನು ಶ್ರೀಮಂತಗೊಳಿಸಬೇಕು ಅದೇ ಅವರಿಗೆ ನಿಜವಾಗಿ ಸಲ್ಲಿಸುವಂತಹ ಶ್ರದ್ಧಾಂಜಲಿ ಎಂದು ಹೇಳಿ ತಮ್ಮಲ್ಲಿ ಅರಿಕೆ ಮಾಡಿ ತಾವು ಕಾಲ ಕೊಟ್ಟಿದ್ದಕ್ಕಾಗಿ ತಮಗೆ ವಂದಿಸಿ ನನ್ನ ನಾಲ್ಕುಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ): ಮಾನ್ಯ ಅಧ್ಯಕ್ಷರೆ, ಶ್ರೀ ಕೆ.ವಿ. ಸುಬ್ಬಣ್ಣನವರು ಕನ್ನಡ ರಂಗಭೂಮಿಗೆ ಒಂದು ಹೊಸ ಆಯಾಮವನ್ನು ಕೊಟ್ಟಿರುವವರು. ಅವರ ನಿಧನದಿಂದ ಕನ್ನಡ ರಂಗಭೂಮಿಗೆ ಅಪಾರವಾದಂತಹ ಸಷ್ಟವಾಗಿದೆ. ನಾವು ಬರೀ ಸಂತಾಪಸೂಚಕ ಸಭೆಯನ್ನು ಮಾಡಿ ಮುಗಿಸುವ ಬದಲು ತಮ್ಮ ಮೂಲಕ ನಾನು ಸರ್ಕಾರವನ್ನು ಅತ್ಯಂತ ಕಳಕಳಿಯಿಂದ ಮನವಿ ಮಾಡುತ್ತಿದ್ದೇನೆ. ಹೊಸ ಆಯಾಮ ಕೊಟ್ಟಿರುವಂತಹ ಸುಬ್ಬಣ್ಣನವರ ಹೆಸರಿನಲ್ಲಿ ಪ್ರತಿವರ್ಷ

ಒಂದುಲಕ್ಷ ರೂಪಾಯಿಗಳ ಪ್ರಶಸ್ತಿಯನ್ನು "ಸುಬ್ಬಣ್ಣ ಪ್ರಶಸ್ತಿ" ಎಂದು ಯಾರು ಉತ್ತಮವಾಗಿ ಒಳ್ಳೆಯ ರಂಗಕಲಾವಿದರು, ನವ್ಯ ರಂಗಭೂಮಿಗೆ ಎಷ್ಟು ಕೆಲಸವನ್ನು ಮಾಡಿದ್ದಾರೆ. ಅಂತಹವರಿಗೆ ಪ್ರತಿವರ್ಷ ಸರ್ಕಾರ ಒಂದು ಲಕ್ಷ ರೂಪಾಯಿಗಳ ಪ್ರಶಸ್ತಿಯನ್ನು ಕೊಡುವುದಕ್ಕೆ ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮುಖ್ಯಮಂತ್ರಿಗಳನ್ನು ಕಳಕಳಿಯಿಂದ ನಾನು ಈ ಸಭೆಯಲ್ಲಿ ಪ್ರಸ್ತಾಪ ಮಾಡುತ್ತಿದ್ದೇನೆ. ಅದು ಅವರಿಗೆ ಸೇರಿರುವಂತಹ ವಿಚಾರವಾಗಿದೆ. ಇದು ಬಹಳ ಉತ್ತಮವಾದುದು, ಬರೀ ಸಂತಾಪ ಮಾಡಿ ನಾಲ್ಕು ಮಾತುಗಳನ್ನು ಹೇಳಿ ಹೋಗುವುದರಿಂದ ಪ್ರಯೋಜನವಾಗುವುದಿಲ್ಲ. ಅವರ ಹೆಸರು ನಿರಂತರವಾಗಿ ಉಳಿಯಬೇಕೆಂಬ ಪ್ರಾಮಾಣಿಕತೆ ಇದ್ದರೆ, ಪ್ರಾಮಾಣಿಕವಾಗಿ ಒಂದು ವರ್ಷದಲ್ಲಿ ಅವರು ಹುಟ್ಟಿದ ದಿನ ಅಥವಾ ಸತ್ತದಿನ ಯಾವತ್ತಾದರೂ ಆಗಲಿ ಒಂದು ಉತ್ತಮವಾದಂತಹ ಸಮಾರಂಭವನ್ನು ಮಾಡಿ ಯಾರು ಬಹಳ ಉತ್ತಮವಾದಂಥ ರಂಗಪ್ರಯೋಗವನ್ನು ಮಾಡಿರುತ್ತಾರೆ ಅವರ ಆಯ್ಕೆಯ ಬಗ್ಗೆ ಒಂದು ಸಮಿತಿಯನ್ನು ಮಾಡಿ, ಆ ಸಮಿತಿಯ ಮೂಲಕ ಯಾರು ಆಯ್ಕೆಯಾಗುತ್ತಾರೆ, ಅವರಿಗೆ ಒಂದು ಲಕ್ಷ ರೂಪಾಯಿಗಳನ್ನು ಪ್ರತಿವರ್ಷ ಕೊಡತಕ್ಕಂತಹ ಕೆಲಸವನ್ನು ಸರ್ಕಾರ ಮಾಡಬೇಕೆಂದು ಹೇಳಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ): ಸನ್ಮಾನ್ಯ ಅಧ್ಯಕ್ಷರೆ, ಹೆಗ್ಗೋಡಿನ ಸುಬ್ಬಣ್ಣನವರು ಎಂದು ಹೇಳಿದರೆ ಬಹುಶ: ಜಗತ್ತಿನ ನಾಟಕರಂಗಕ್ಕೆ ತುಂಬಾ ಚಿರಪರಿಚಿತರು. ಅವರು ದೆಹಲಿಯಲ್ಲಿರತಕ್ಕಂತಹ ನ್ಯಾಷನಲ್ ಸ್ಕೂಲ್ ಆಫ್ ಡ್ರಾಮದ ರೀತಿಯಲ್ಲಿ ಒಂದು ಸಣ್ಣ ಹಳ್ಳಿಯಲ್ಲಿ ರಂಗಭೂಮಿಯನ್ನು "ನೀನಾಸಂ" ಹೆಸರಿನಲ್ಲಿ ಪ್ರಾರಂಭ ಮಾಡಿ ಹಲವಾರು ಪ್ರತಿಭಾವಂತ ನಿರ್ದೇಶಕರುಗಳಿಗೆ ತರಬೇತಿಯನ್ನು ಕೊಟ್ಟಿದ್ದಾರೆ. ಮತ್ತು ಹಲಾರು ಪ್ರತಿಭಾವಂತ ನಿರ್ದೇಶಕರನ್ನು ಅವರ ಗರಡಿಯಲ್ಲಿ ಅಲ್ಲಿ ತಯಾರು ಮಾಡಿದ್ದಾರೆ. ಅದಕ್ಕಿಂತ ಬಹಳ ಮುಖ್ಯವಾಗಿ ಜನಪರವಾಗಿ ಮತ್ತು ಜನರ ಬದುಕಿಗೆ ನೇರವಾಗಿ ಸಂಬಂಧಪಟ್ಟಂಥ ರೀತಿಯಲ್ಲಿ ನಾಟಕಗಳು ಮತ್ತು ಅವರ ಕಾರ್ಯಾಗಾರಗಳು ನಡೆಯುತ್ತಿದ್ದು ಬಹಳ ಮುಖ್ಯ. ಇವತ್ತು ಅದ:ಪತನ ಹೊಂದುತ್ತಿರುವಂಥ ಜಗತ್ತಿನಲ್ಲಿ ಜೀವಶೆಲೆಯಾಗಿರತಕ್ಕಂಥ ಮತ್ತು ಜೀವಪರವಾಗಿರತಕ್ಕಂಥ ಒಂದು ಸಂಸ್ಕೃತಿಕ ಚಳುವಳಿಯನ್ನು ಹುಟ್ಟುಹಾಕುವುದರಲ್ಲಿ ಸುಬ್ಬಣ್ಣನವರು ಒಂದು ಪ್ರಮುಖ ಪಾತ್ರವನ್ನು

ವಹಿಸಿದ್ದಾರೆ. ಅಷ್ಟೇ ಅಲ್ಲ, ಇಡೀ ಕರ್ನಾಟಕದ ಈ ರಂಗ ಚಳುವಳಿ ಏನಿದೆ, ಅದರಲ್ಲಿ ಹೊಸ ಆಯಾಮಗಳನ್ನು ತಂದು ಕೊಟ್ಟಂಥವರಲ್ಲಿ ಸುಬ್ಬಣ್ಣನವರು ಒಬ್ಬರು. ಸಮುದಾಯದ ಸಂಘಟನೆ ಅಥವಾ ಅದನ್ನು ಹುಟ್ಟು ಹಾಕಿದಂಥ ಪ್ರಸನ್ನ, ಕೆ.ವಿ.ಸುಬ್ಬಣ್ಣ, ಬಿ.ವಿ.ಕಾರಂತ, ಇವರೆಲ್ಲಾ ಇಡೀ ರಂಗ ಚಳುವಳಿಗೆ ಒಂದು ಹೊಸ ಆಯಾಮಗಳನ್ನು ತಂದುಕೊಟ್ಟಂಥವರು ಕರ್ನಾಟಕ ರಾಜ್ಯದಲ್ಲಿ, ಬರೀ ಕರ್ನಾಟಕ ರಾಜ್ಯದಲ್ಲಿ ಅಲ್ಲ, ಇಡೀ ಭಾರತದಲ್ಲಿ ಹಾಗೂ ಜಗತ್ತಿನಲ್ಲೂ ಕೂಡ ಹೆಸರನ್ನು ಗಳಿಸಿದಂಥವರು ಬಿ.ವಿ.ಕಾರಂತ, ಪ್ರಸನ್ನ, ಕೆ.ವಿ.ಸುಬ್ಬಣ್ಣನವರು ಆ ರೀತಿಯಲ್ಲಿ ಜನಪರವಾದಂಥ ಜನ ಸಂಸ್ಕೃತಿಯ ಪರವಾಗಿ ಸಾಂಸ್ಕೃತಿಕ ಚಳುವಳಿಯನ್ನು ರೂಪಿಸತಕ್ಕಂಥವರ ಸಂಖ್ಯೆ ಬಹಳ ಕಡಿಮೆಯಾಗತಕ್ಕಂಥ ಈ ಸಂದರ್ಭದಲ್ಲಿ ಸುಬ್ಬಣ್ಣನವರ ಒಂದು ನಿಧನ ಆಘಾತಕಾರಿಯಾದಂಥ ಸುದ್ದಿಯಾಗಿದೆ. ಅದಕ್ಕೆ ಅವರ ನಿರಂತರವಾಗಿ ಜ್ಞಾಪಕಾರ್ಥವಾಗಿ ಮಾಡಬೇಕಾದಂಥ ಕೆಲಸವನ್ನು ಮಾನ್ಯ ವಾಟಾಳ್ ರವರು ಏನು ಸೂಚನೆಯನ್ನು ಮಾಡಿದ್ದಾರೆ ಆ ಕೆಲಸವನ್ನು ಅವರ ಹೆಸರಿನಲ್ಲಿ ಪ್ರತಿವರ್ಷ ಒಂದು ಪ್ರಶಸ್ತಿ ಪ್ರಧಾನವನ್ನುಕೊಡತಕ್ಕಂಥ ಅತ್ಯುತ್ತಮವಾದ ಕಲಾವಿದರನ್ನು ಆಯ್ಕೆ ಮಾಡತಕ್ಕಂಥ ಕೆಲಸ ಮಾಡಿದರೆ ಅವರ ಹೆಸರು ಶಾಶ್ವತವಾಗಿ ಉಳಿಯುತ್ತದೆ. ಹೆಗ್ಗೋಡಿನ ಅವರ ಕರ್ಮಭೂಮಿ ಏನಿತ್ತು ಸರ್ಕಾರ ಎಲ್ಲಾ ರೀತಿಯ ನೆರವನ್ನು ನೀಡಿ ದೇಶದಲ್ಲಿ ಪ್ರಸಿದ್ಧವಾದಂಥ ರಂಗ ಚಳುವಳಿಯನ್ನು ಹುಟ್ಟುಹಾಕಲಿಕ್ಕೆ ಬೇಕಾದಂಥ ಎಲ್ಲಾ ವ್ಯವಸ್ಥೆಯನ್ನು ಸರ್ಕಾರ ಮಾಡಬೇಕು ಅದರಿಂದ ಸುಬ್ಬಣ್ಣನವರ ಆಸೆಯನ್ನು ನಾವು ನೆರವೇರಿಸಿದಂತಾಗುತ್ತದೆಂದು ಹೇಳಿ ತಾವು ತಂದಿರುವ ಸಂತಾಪ ಸೂಚನೆಯನ್ನು ನಾನು ಅನುಮೋದನೆಮಾಡಿ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಕೆ.ವಿ.ಸುಬ್ಬಣ್ಣನವರು ಇವತ್ತು ಇಲ್ಲದೇ ಇರುವುದು ಇಡೀ ನಾಡಿನ ಎಲ್ಲಾ ಸಾಂಸ್ಕೃತಿಕ ಮತ್ತು ರಂಗ ಚಟುವಟಿಕೆಯ ಪ್ರೇಮಿಗಳಿಗೆ ಒಂದು ದೊಡ್ಡ ಆಘಾತವಾಗಿದೆ. ಸಾಂಸ್ಕೃತಿಕ ಚಟುವಟಿಕೆಗಳ ಮತ್ತು ರಂಗ ಚಟುವಟಿಕೆಗಳಿಗೆ ಪ್ರತೀಕ ಈ ಕೆ.ವಿ.ಸುಬ್ಬಣ್ಣನವರು. ಇವತ್ತು ಅವರ ಒಂದು ಚಟುವಟಿಕೆಗಳನ್ನು ನೆನಪು ಮಾಡಿಕೊಂಡು ಅವರ ಸ್ಫೂರ್ತಿನಲ್ಲಿ ಇವತ್ತು ರಾಜ್ಯದಲ್ಲಿ ಸಾವಿರಾರು ಜನ ಕಲಾವಿದರು ಇವತ್ತು ತಯಾರಾಗಿದ್ದಾರೆ. ಹೀಗಾಗಿ ನಾನು ರಾಜ್ಯದ ಮುಖ್ಯಮಂತ್ರಿಗಳನ್ನು ಬೇಡಿಕೊಳ್ಳುವುದು ಇಷ್ಟೆ ಅವರ ನೆನಪಿಗೆ ಅವರ

ಅಪೇಕ್ಷೆ ಏನೇನು ಇತ್ತು ಅದನ್ನೆಲ್ಲಾ ಈಡೇರಿಸುವ ದೃಷ್ಟಿಯಿಂದ ಶಿವಮೊಗ್ಗದಲ್ಲಿ ಸರಿಯಾದ ಒಂದು ಕೇಂದ್ರವನ್ನು ಆರಂಭ ಮಾಡಿ ಅವರ ಚಟುವಟಿಕೆಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದಕ್ಕೆ ಯುವಕರಿಗೆ ಸ್ಫೂರ್ತಿದಾಯಕವಾದ ಒಂದು ಕೇಂದ್ರವನ್ನು ಆರಂಭ ಮಾಡಲಿ ಎಂದು ನಾನು ಒತ್ತಾಯವನ್ನು ಮಾಡಿ ಅವರಿಗೆ ನನ್ನ ಶ್ರದ್ಧಾಂಜಲಿಯನ್ನು ಅರ್ಪಿಸುತ್ತೇನೆ.

ಶ್ರೀ ಹೆಚ್. ಆಂಜನೇಯ (ಭರಮಸಾಗರ): ಮಾನ್ಯ ಅಧ್ಯಕ್ಷರೆ, ಶ್ರೀಮಾನ್ ಸುಬ್ಬಣ್ಣನವರು ಒಬ್ಬ ಕ್ರಾಂತಿಕಾರಿ ವಿಚಾರವಾದಿಗಳು, ರಂಗಕರ್ಮಿಗಳು, ಈ ರಂಗಭೂಮಿ ಮತ್ತು ಬೀದಿ ನಾಟಕಗಳು ಇತ್ತೀಚಿನ ದಿನಗಳಲ್ಲಿ ಬಹಳ ಜನಪ್ರಿಯತೆ ಗಳಿಸಿದವು. ಅದರ ಹಿಂದೆ ಸುಬ್ಬಣ್ಣನವರ ಶ್ರಮ ಅವರ ವಿಚಾರಧಾರೆಗಳು ತುಂಬಾ ಅಡಕವಾಗಿವೆ. ಗಾಂಧೀಜಿಯವರಿಂದ ಮತ್ತು ರಾಮಮನೋಹರ ಲೋಹಿಯಾರವರಿಂದ ಸ್ಫೂರ್ತಿ ಪಡೆದಂತಹ ಸುಬ್ಬಣ್ಣನವರು ಈ ಸಮಾಜದ ಎಲ್ಲಾ ಅಂಕುಡೊಂಕುಗಳನ್ನು ತಿದ್ದತಕ್ಕಂತಹ ಮತ್ತು ಸಾಮಾಜಿಕ ನ್ಯಾಯದ ಪರಿಕಲ್ಪನೆಯಲ್ಲಿ ಹೋರಾಟ ಮಾಡಿದಂತಹ ಒಬ್ಬ ಚಿಂತನಶೀಲ ವ್ಯಕ್ತಿಯಾಗಿದ್ದರು. ಅಂತಹವರ ನಿಧನದಿಂದ ನಾಡಿಗೆ ಮತ್ತು ರಂಗಭೂಮಿಗೆ ತುಂಬಲಾರದ ನಷ್ಟವಾಗಿದೆ ಎಂದು ನಾನು ನಮ್ಮ ಜೆ.ಡಿ.ಯು.ಪಕ್ಷದಿಂದ ತೀವ್ರವಾದ ಸಂತಾಪವನ್ನು ವ್ಯಕ್ತಪಡಿಸುತ್ತೇನೆ. ಮಾನ್ಯ ಸದಸ್ಯರಾದ ಶ್ರೀಮಾನ್ ವಾಟಾಳ್ ನಾಗರಾಜ್‌ರವರು ಹೇಳಿದಂತೆ ಅವರ ಹೆಸರಿನಲ್ಲಿ ಒಂದು ಪ್ರಶಸ್ತಿಯನ್ನು ಸರ್ಕಾರ ಘೋಷಣೆಯನ್ನು ಮಾಡಬೇಕು, ಅದೇ ರೀತಿಯಾಗಿ ಮಾನ್ಯ ಈಶ್ವರಪ್ಪನವರು ಹೇಳಿದಹಾಗೆ ಅವರ ಜಿಲ್ಲೆಯಾಗಿರುವಂತಹ ಶಿವಮೊಗ್ಗ ಜಿಲ್ಲೆಯಲ್ಲಿ ಅವರ ಹೆಸರಿನಲ್ಲಿ ಒಂದು ದೊಡ್ಡದಾದಂತಹ ಒಂದು ನಾಟಕ ಶಿಬಿರದ ಶಾಲೆಯನ್ನು ಮಾಡಬೇಕು. ಒಂದು ವಿಶ್ವವಿದ್ಯಾನಿಲಯ ಸರ್ಕಾರ ಮಾಡಲಾರದಂತಹ ಕೆಲಸವನ್ನು ಈ ನಾಡಿನಲ್ಲಿ, ಈ ರಾಷ್ಟ್ರದಲ್ಲಿ ಕೆಲಸಕಾರ್ಯಗಳನ್ನು ಮಾಡಿದಂತಹ ಸುಬ್ಬಣ್ಣನವರ ಹೆಸರು ನಮ್ಮ ಮುಂದಿನ ಪೀಳಿಗೆಗೆ ಅಜರಾಮರವಾಗಿ ಅವರ ಹೆಸರು ಉಳಿಯುವಂತಹ ಒಂದು ಕೆಲಸವನ್ನು ಸರ್ಕಾರ ಮಾಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರದ ಮೇಲೆ ಒತ್ತಡವನ್ನು ಹಾಕುತ್ತೇನೆ. ಅವರ ಅಗಲಿಕೆಯಿಂದ ಆಗಿರುವಂತಹ ದು:ಖವನ್ನು ಭರಿಸತಕ್ಕಂಥ ಶಕ್ತಿಯನ್ನು ಅವರ ಕುಟುಂಬ

ವರ್ಗದವರಿಗೆ ಭಗವಂತನು ಕರುಣಿಸಲಿ ಎಂದು ಹಾರೈಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ): ಮಾನ್ಯ ಅಧ್ಯಕ್ಷರೆ, ಸಾಂಸ್ಕೃತಿಕ ಸಾಹಿತ್ಯದ ಜಗತ್ತಿಗೆ ಬಹಳ ದೊಡ್ಡ ಕೊಡುಗೆಯನ್ನು ಕೊಟ್ಟಿರುವಂತಹ ಶ್ರೀ ಕೆ.ವಿ.ಸುಬ್ಬಣ್ಣನವರು ನನ್ನ ತೀರ್ಥಹಳ್ಳಿ ತಾಲ್ಲೂಕಿನ ಅಳಿಯಂದಿರು. ಕಮಕೋಡು ನರಸಿಂಹಶಾಸ್ತ್ರಿ ಖ್ಯಾತ ಸಾಹಿತಿಗಳು ಅವರ ಅಳಿಯಂದಿರಾಗಿ ತೀರ್ಥಹಳ್ಳಿ ಮತ್ತು ಸಾಗರ ತಾಲ್ಲೂಕುಗಳಲ್ಲಿ ಅಪಾರವಾಗಿರತಕ್ಕಂತಹ ಸ್ನೇಹಿತರನ್ನು ಸಾಹಿತಿಗಳ ಒಂದು ಸಹವಾಸ ಇಡೀ ರಾಜ್ಯದಲ್ಲಿ, ನಾಡಿನಲ್ಲಿ ಬೆಳೆಸಿಕೊಂಡರು. ಹೆಗ್ಗೋಡಿನಂತಹ ಒಂದು ಕುಗ್ರಾಮದಲ್ಲಿ, ಕುಗ್ರಾಮದ ಬಗ್ಗೆ ಇಡೀ ದೇಶದ ಗಮನವನ್ನು ಸೆಳೆಯುವಂತಹ ರೀತಿಯಲ್ಲಿ ಸಂಶೋಧನೆಗಳನ್ನು ಮಾಡಿದ್ದಾರೆ. ರಂಗಭೂಮಿಯ ಸಂಶೋಧನೆಗಳು ಜನರ ಮನಸ್ಸಿನಲ್ಲಿ ಸುಬ್ಬಣ್ಣನವರನ್ನು ಸದಾಕಾಲ ಚಿರಸ್ಥಾಯಿಯಾಗಿ ಇರುವಂತಹ ಕೆಲಸ ಅವರ ಕಡೆಯಿಂದ ಆಗಿದೆ. ರಂಗಚಟುವಟಿಕೆಯ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ವಿಶೇಷವೆಂದರೆ ಸಾಗರ ತಾಲ್ಲೂಕಿನ ಹೆಗ್ಗೋಡಿನಂತಹ ಗ್ರಾಮದ ಸುತ್ತ ಇರತಕ್ಕಂತಹ ಗ್ರಾಮಸ್ಥರುಗಳು ನಾಟಕಗಳನ್ನು ವಿಮರ್ಶೆ ಮಾಡುವಂತಹ ಶಕ್ತಿಯನ್ನು ಪಡೆಯುವಂತಾಗಿದ್ದಾರೆ. ಇದು ಬಹಳ ಆಶ್ಚರ್ಯವಾಗುತ್ತದೆ. ಸುಬ್ಬಣ್ಣನವರು ಆ ಎಲ್ಲಾ ಇಡೀ ಸಮುದಾಯವನ್ನು ಸೇರಿಸಿ ಹೊಸ ಹೊಸ ಪ್ರಯೋಗಗಳನ್ನು ಮಾಡುತ್ತಾ ಈ ಒಂದು ಜನರನ್ನೂ ಕೂಡ ಆ ಮಟ್ಟಕ್ಕೆ ಏರಿಸುವಂತಹ ಪ್ರಯತ್ನ ಸುಬ್ಬಣ್ಣನವರ ಕಡೆಯಿಂದ ಆಯಿತು. ಡಾ.ಶಿವರಾಮಕಾರಂತರ ರಂಗಮಂದಿರವನ್ನು ನಿರ್ಮಾಣಮಾಡಿ ಇವತ್ತು ಕೂಡ ನಮ್ಮ ರಾಜ್ಯದಲ್ಲಿ ರಂಗಮಂದಿರದ ಹೊಸದಾಗಿ ಜನರು ಕಟ್ಟಬೇಕೆಂದರೆ ಜನರು ಅಲ್ಲಿಗೆ ಬಂದು ನೋಡಿಕೊಂಡು ಹೋಗುತ್ತಾರೆ. ಸುಬ್ಬಣ್ಣನವರು ಯಾವರೀತಿಯಾಗಿ ಕಟ್ಟಿದ್ದಾರೆ, ಯಾವ ರೀತಿಯಾಗಿ ರಂಗಮಂದಿರಕ್ಕೆ ಬೇಕಾಗುತ್ತದೆ, ಎಂಬುದರ ಬಗ್ಗೆ ಅಲ್ಲಿ ನೋಡಿ ಹೋಗುವಂತಹ ರೀತಿಯಲ್ಲಿ ಒಂದು ಹೊಸ ರೀತಿಯಾಗಿ ನಿರ್ಮಾಣವನ್ನು ಮಾಡಿದ್ದಾರೆ. ಇವರ ತರಬೇತಿ ಶಿಬಿರದ ಪರಿಣಾಮ ಇವತ್ತು ನೂರಾರು ಯುವಕರುಗಳು ನಾಟ್ಯರಂಗಕ್ಕೆ ಕಾಲಿಡುವಂತಾಯಿತು. ವಿಶೇಷವಾಗಿ ಅನೇಕ ಯುವಕ–ಯುವತಿಯರು ಸಿನಿಮಾ ರಂಗದಲ್ಲಿಯೂ ಕೂಡ ದುಡಿಯುತ್ತಿದ್ದಾರೆ. ನನಗೆ ಆಶ್ಚರ್ಯವಾಗುವುದು ಎಂದರೆ ಇಂತಹ ಒಬ್ಬ

ಶ್ರೇಷ್ಠ ಚಿಂತಕ ಮ್ಯಾಗ್ಸೆಸೆ ಪ್ರಶಸ್ತಿ ಪಡೆದಂತಹ ಹಾಗೂ ಪದ್ಮಶ್ರೀ ಪುರಸ್ಕೃತರಾದಂತಹ ಶ್ರೀ ಕೆ.ವಿ. ಸುಬ್ಬಣ್ಣನವರ ನಿಧನವಾದಾಗ ಅವರ ಅಂತ್ಯಸಂಸ್ಕಾರದಲ್ಲಿ ಕನಿಷ್ಠ ಸರ್ಕಾರದ ಪರವಾಗಿ ನಮ್ಮ ಜಿಲ್ಲೆಯ ಉಸ್ತುವಾರಿ ಸಚಿವರಾದರೂ ಕೂಡ ಭಾಗವಹಿಸಬೇಕಾಗಿತ್ತು. ಸರ್ಕಾರದ ಕಡೆಯಿಂದ ಗೌರವವನ್ನು ಸಲ್ಲಿಸಬೇಕಾಗಿತ್ತು. ಇದೊಂದು ಲೋಪವಾಗಿದೆ ಎಂದು ನನ್ನ ಅನಿಸಿಕೆಯಾಗಿದೆ. ಇವತ್ತು ಅವರು ಮಾಡಿರತಕ್ಕಂತಹ ಪ್ರಯತ್ನ ಈಗಾಗಲೇ ನಮ್ಮ ಮಿತ್ರರು ಹೇಳಿದ ಹಾಗೆ ಒಂದು ವಿಶ್ವವಿದ್ಯಾನಿಲಯ ಮಾಡುವಂತಹ ಕೆಲಸವನ್ನು ಶ್ರೀ ಸುಬ್ಬಣ್ಣನವರು ಮಾಡಿದರು. ಅಂತಹ ಒಂದು ಕೆಲಸಗಳು ಚಿರಸ್ಥಾಯಿಯಾಗಿ ಇರಬೇಕಾದರೆ ಈಗಾಗಲೆ ನಮ್ಮಮಿತ್ರರು ಹೇಳಿದಹಾಗೆ ಅವರ ಹೆಸರು ಸದಾಕಾಲ ಉಳಿಯುವ ಹಾಗೆ ಆ ರಂಗಭೂಮಿಯ ಚಟುವಟಿಕೆಗಳು ನಿರಂತರವಾಗಿ ನಡೆಯುವ ಹಾಗೆ ಶಿವಮೊಗ್ಗ ಜಿಲ್ಲೆಯಲ್ಲಿ ಒಂದು ದೊಡ್ಡ ಕಾರ್ಯವನ್ನು ಮಾಡಬೇಕು. ಅದು ನಿರಂತರವಾಗಿ ಇರುವಂತೆ ಮಾಡಬೇಕು. ಇದನ್ನು ಮಾಡಬೇಕಾದರೆ ಮೊದಲು ಅಲ್ಲಿ ಅವರ ಅನೇಕ ಅಭಿಮಾನಿಗಳು ಇದ್ದಾರೆ, ಅವರ ಒಡನಾಡಿಗಳೂ ಸಹ ಇದ್ದಾರೆ, ಅವರ ಜೊತೆಯಲ್ಲಿ ಸರ್ಕಾರ ಚರ್ಚೆ ಮಾಡಿ ಏನನ್ನು ಮಾಡಬೇಕೆಂಬುದರ ಬಗ್ಗೆ ನಿರ್ಣಯ ಮಾಡಲಿ ಎಂದು ಹಾರೈಸುತ್ತಾ, ತಾವು ತಂದಿರತಕ್ಕಂತಹ ಈ ಸಂತಾಪ ಸೂಚಕ ನಿರ್ಣಯಕ್ಕೆ ನಾನು ಕೂಡ ಅನುಮೋದಿಸಿ ನನ್ನ ನುಡಿನಮನಗಳನ್ನು ಸಲ್ಲಿಸುತ್ತಾ ನನ್ನ ಮಾತನ್ನು ಮುಗಿಸುತ್ತೇನೆ.

ಶ್ರೀ ಕೆ. ವಿಶ್ವೇಶ್ವರ ಹೆಗಡೆ ಕಾಗೇರಿ(ಅಂಕೋಲ): ಮಾನ್ಯ ಅಧ್ಯಕ್ಷರೆ, ತಾವು ತಂದಿರತಕ್ಕಂತಹ ಸಂತಾಪ ಸೂಚನೆಯನ್ನು ಅನುಮೋದಿಸುತ್ತಾ ಶ್ರೀ ಕೆ.ವಿ.ಸುಬ್ಬಣ್ಣನವರು ಮಲೆನಾಡಿನ ಜಿಲ್ಲೆಗಳಿಗೆ ಬಹಳ ಒಡನಾಡಿಗಳು. ಇಡೀ ರಾಷ್ಟ್ರಕ್ಕೆ ಹಾಗೂ ರಾಜ್ಯಕ್ಕೆ ಚಿರಪರಿಚಿತರು. ಆ ಆತ್ಮೀಯವಾದಂತಹ ಸಂಬಂಧ ಮತ್ತು ಸಂಪರ್ಕವನ್ನು ಮಲೆನಾಡಿನ ಜಿಲ್ಲೆಗಳಿಗೆ ಅವರು ಕೊಟ್ಟಿರುವಂತವರಾಗಿದ್ದಾರೆ. ಅವರ ಎಲ್ಲಾ ಈ ಆಸಕ್ತಿ ಕ್ಷೇತ್ರಗಳಲ್ಲಿ ತಮ್ಮಂತೇ ಅನೇಕ ಯುವಕರನ್ನು ತರಬೇತಿ ಗೊಳಿಸುವುದು ಉತ್ತರಕನ್ನಡ ಜಿಲ್ಲೆಯಲ್ಲಿಯೂ ಇದೆ. ಶ್ರೀಯುತ ಆರ್.ವಿ. ದೇಶಪಾಂಡೆ ಇಲ್ಲಿದ್ದಾರೆ, ಅವರ ಕ್ಷೇತ್ರದ ನಮ್ಮ ಎಲ್ಲಾಪುರದ ತಾಲ್ಲೂಕಿನ ಮಂಚಿಕೇರಿಯಲ್ಲಿಯೂ ಸಹ ಈ ರಂಗಭೂಮಿಗೆ ವಿಶೇಷವಾದಂತಹ ಒಂದು ಗುರುತಿಸಲ್ಪಡುವಂತಹ ಕ್ಷೇತ್ರವನ್ನಾಗಿ ಶ್ರೀ ಕೆ.ವಿ. ಸುಬ್ಬಣ್ಣನವರು ಕೊಡುಗೆಯನ್ನು ಕೊಟ್ಟಿದ್ದಾರೆ. ಮಲೆನಾಡಿನ ಜಿಲ್ಲೆಯ ಅತ್ಯಂತ ಆತ್ಮೀಯವಾಗಿ ಅವರ ಆತ್ಮೀಯತೆ ಹಾಗೂ

ಸರಳತೆ ಸಜ್ಜನಿಕೆ ಅವರ ಬಗ್ಗೆ ಎಷ್ಟು ಬಾಯಿತುಂಬಾ ಮಾತನಾಡಿದರೂ ಅದು ಕಡಿಮೆಯಾಗುತ್ತದೆ. ಅವರು ಎಲ್ಲಾ ಪ್ರಶಸ್ತಿಗಳನ್ನು ತೆಗೆದುಕೊಂಡಿರುವುದನ್ನು ನೋಡಿದಾಗ ಅವರು ಜೀವಿಸುತ್ತಿರುವಂತಹ ಸರಳತೆಯನ್ನು ನೋಡಿದರೆ ಅವರಲ್ಲಿರುವಂತಹ ವಿಶೇಷವಾದಂತಹ ನಡವಳಿಕೆಯನ್ನು ನೋಡಿದಾಗ ನನಗೆ ಆಶ್ಚರ್ಯವಾಗುತ್ತದೆ. ನಾನು ಒಂದು ಕಾರ್ಯಕ್ರಮದಲ್ಲಿ ಅವರ ಜೊತೆಗಿದ್ದೆ. ನಾನು ಅಧಿಕಾರಿಗಳಿಗೆ ಒಂದು ಪತ್ರವನ್ನು ಬರೆದಿದ್ದೆ, ಅದರಲ್ಲಿ ಕೊನೆಯಲ್ಲಿ ವಿನಂತಿಸುತ್ತೇನೆಂದು ಬರೆದಿದ್ದೆ. ಆ ಪತ್ರದ ಪ್ರತಿಯನ್ನು ನಾನು ಪತ್ರಕರ್ತರಿಗೆ ಕೊಟ್ಟಿದ್ದೆ. ಪತ್ರಕರ್ತರು ಅದರ ಬಗ್ಗೆ ಕಾಮೆಂಟ್ ಮಾಡಿದರು. ಶಾಸಕರಾಗಿ ಅಧಿಕಾರಿಗಳಿಗೆ ವಿನಂತಿಸಿಕೊಳ್ಳುವುದು ಇದು ಶಾಸಕರಿಗೆ ಯಾವ ಪರಿಸ್ಥಿತಿ ಬಂದಿದೆ ಎಂದು, ಆ ಸಭೆಯಲ್ಲಿ ನಾನು ಮತ್ತು ಕೆ.ವಿ.ಸುಬ್ಬಣ್ಣನವರು ಪತ್ರಕರ್ತ ಸ್ನೇಹಿತರೆಲ್ಲರೂ ಒಟ್ಟಿಗೆ ಇದ್ದೆವು. ನಾನು ಸೌಜನ್ಯ ಪೂರ್ವಕವಾಗಿ ಆ ಶಬ್ದವನ್ನು ಬಳಸಿದ್ದೇನೆಂದು ಪತ್ರಕರ್ತರಿಗೆ ಹೇಳಿದೆ. ನಾನು ಎಲ್ಲಾ ಪತ್ರಗಳಿಗೆ ಆ ಶಬ್ದವನ್ನು ಬಳಸುತ್ತೇನೆ. ನಾನು ರೂಢಿಯಿಂದ ಆ ಪದವನ್ನು ಬಳಸಿದ್ದೇನೆ ಎಂದು ಹೇಳಿದೆ. ಆಗ ಪತ್ರಕರ್ತರು ನನಗೆ ಹೇಳಿದರು. ಇಲ್ಲಾ,ಇಲ್ಲಾ, ನೀವು ಅಧಿಕಾರಿಗಳಿಗೆ ಸೂಚಿಸಬೇಕೆಂದು ಆದೇಶಿಸಬೇಕು, ವಿನಂತಿಸಿಕೊಳ್ಳುವುದು ಸರಿಯಲ್ಲ ಎಂದು ಹೇಳಿದರು. ಪಕ್ಕದಲ್ಲಿ ಸುಬ್ಬಣ್ಣನವರು ಇದ್ದರು, ಅವರು ಪತ್ರಕರ್ತರ ಸ್ನೇಹಿತರು ಹೌದು, ಇಲ್ಲಾ ಶಾಸಕರು ಮಾಡಿರುವುದು ಸರಿಯಾಗಿದೆ ಎಂದು ಹೇಳಿದರು.ಈ ರೀತಿಯಾಗಿ ಸೌಜನ್ಯ ಪೂರ್ವಕವಾದ ಬಳಕೆಯನ್ನು ನಾವು ಮಾಡಲೇಬೇಕು, ನೀವು ಶಾಸಕರಾಗಿರಬಹುದು, ಆದರೆ ನೀವು ಆ ಸೌಜನ್ಯವನ್ನು ಮೀರಿ ವರ್ತಿಸುವುದು ಸರಿಯಲ್ಲ, ಮುಂದಿನ ದಿನಗಳಲ್ಲಿ ನೀವು ಜವಾನನಿಗೂ ಪತ್ರ ಬರೆದರೆ ವಿಶ್ವೇಶ್ವರ ಹೇಗಡೆಯರೆ, ನೀವು ವಿನಂತಿಸುತ್ತೇನೆಂದು ಎಂದು ಹೇಳುವುದನ್ನು ಬಿಡಬೇಡಿ ಎಂದು ಹೇಳಿದರು. ಅವರು ಆನಂತರ ಪತ್ರಕರ್ತರು ಅದನ್ನು ತಿದ್ದಿಕೊಂಡು ಅದನ್ನು ಸರಿಮಾಡಿಕೊಂಡು ಬರೆದಿರುವುದು ಬೇರೆ. ಇಷ್ಟು ಅವರು ಸೌಜನ್ಯಪೂರ್ವಕವಾಗಿ, ಸತ್ಯಸಂಗತಿಯನ್ನು ಅವರ ಸ್ನೇಹಿತರು ಪತ್ರಕರ್ತರಾದರೂ ಸಹ ನೀವು ಮಾಡಿರುವುದು ತಪ್ಪು ಅವರು ಮಾಡಿರುವುದು ಸರಿಯಾಗಿದೆ ಎನ್ನುವಂತಹ ಮಾತನ್ನು ಹೇಳಿದ್ದರು. ಅಕ್ಷರಪ್ರಕಾಶನದ ಬಗ್ಗೆ ಒಂದೇ ಮಾತನ್ನು ಹೇಳುತ್ತೇನೆ, ಅನೇಕ ಪ್ರಕಾಶನಗಳು ಇವೆ, ಅಕ್ಷರ ಪ್ರಕಾಶನದವರು ಮುದ್ರಿಸಿರುವಂತಹ ಪುಸ್ತಕ ನಿಜವಾಗಿಯೂ

ಸರ್ಕಾರ ಆ ಪುಸ್ತಕಗಳನ್ನು ಎಲ್ಲಾ ಲೈಬ್ರರಿಗಳಲ್ಲೂ ಇಡುವಂತಹ ಒಂದು ಪ್ರಯತ್ನವನ್ನು ಮಾಡಬೇಕು. "ಇರುವುದೊಂದೇ ಭೂಮಿ" ಎಂದು ಒಂದು ಪುಸ್ತಕವನ್ನು ಬರೆದರು. ಹಿಂದೆ ನಾನು ಮೊದಲನೆ ಬಾರಿಗೆ ಆಯ್ಕೆ ಯಾದಾಗ ನಾನು ಮಾತನಾಡಿದೆ, ಈ ಭೂಮಿ ಒಂದೇ ಇದೆ, ಆದರೆ ಈ ಸಂಪತ್ತನ್ನು ಈ ಪ್ರಕೃತಿಯನ್ನು ಈ ಒಂದು ಪರಿಸರವನ್ನು ನಾವು ಹೇಗೆ ಅದನ್ನು ದುರುಪಯೋಗ ಪಡಿಸಿಕೊಳ್ಳುತ್ತಿದ್ದೇವೆ. ಅದನ್ನು ನಾವು ಹೇಗೆ ನಮ್ಮ ಸ್ವಾರ್ಥಕ್ಕಾಗಿ ಬಳಸಿಕೊಳ್ಳುತ್ತಿದ್ದೇವೆ ಎಂಬುದರ ಬಗ್ಗೆ "ಇರುವುದೊಂದೇ ಭೂಮಿ" ಅದರೊಳಗೆ ಬಹಳ ಸ್ಪಷ್ಟವಾಗಿ ಬಹಳ ನಮಗೆ ಭಯಾನಕವಾದಂತಹ ಚಿತ್ರಣ ಭವಿಷ್ಯದಲ್ಲಿ ನಿರ್ಮಾಣವಾಗಬಹುದು ಎಂಬುದನ್ನು ಆ ಪುಸ್ತಕದ ಮೂಲಕ ತೋರಿಸಿದ್ದಾರೆ. ಹಾಗಾಗಿ ಅವರು ಪ್ರಕಾಶಿಸಿರುವಂತಹ ಎಲ್ಲಾ ಪುಸ್ತಕಗಳು ಎಲ್ಲಾ ಲೈಬ್ರರಿಗಳಲ್ಲಿ ಸಿಗುವಂತಾಗಬೇಕೆಂಬ ಮಾತನ್ನು ಹೇಳುತ್ತೇನೆ. ಅವರ ಜೊತೆಯಲ್ಲಿ ಒಡನಾಡಿಗಳಾಗಿರುವಂತಹ ಈಗಾಗಲೇ ಅನೇಕ ಹಿರಿಯರು ಇದ್ದಾರೆ, ಮುಂದೆ ಅವರ ನೆನಪು ಸದಾ ಇರಬೇಕು ಅವರ ಜೀವನದ ಸ್ಫೂರ್ತಿ ಯುವಕರಿಗೆ ಸದಾ ಮಾರ್ಗದರ್ಶನವಾಗಬೇಕು, ಸಮಾಜದಲ್ಲಿ ಪರಿವರ್ತನೆ ತರುವ ಬಗ್ಗೆ ಅನೇಕ ಕ್ಷೇತ್ರಗಳಲ್ಲಿ ಇದೆ. ಈ ಕ್ಷೇತ್ರದ ಮೂಲಕವು ಸಮಾಜದಲ್ಲಿ ಪರಿವರ್ತನೆಯನ್ನು ತರುವುದಕ್ಕೆ ಕೆ.ವಿ.ಸುಬ್ಬಣ್ಣನವರಿಂದ ನಾವೆಲ್ಲರೂ ಸಹ ಒಂದು ಪಾಠವನ್ನು ಕಲಿಯುವಂತಹ ಮುಂದಿನ ಜನಾಂಗಕ್ಕೂ ಕೂಡ ಆಗಬೇಕು, ಆ ರೀತಿಯ ಪ್ರಯತ್ನಗಳು ಆಗಬೇಕೆಂಬ ವಿನಂತಿಯನ್ನು ಮಾಡಿಕೊಂಡು ಸರ್ಕಾರದಲ್ಲಿ ಯಾರೂ ಮಂತ್ರಿಗಳು ಭಾಗವಹಿಸದೆ ಲೋಪ ಆಗಿದೆ, ಆ ಲೋಪವನ್ನು ಸರಿಪಡಿಸಿಕೊಳ್ಳುವಂತಹ ಹಿನ್ನೆಲೆಯಲ್ಲಿ ಬರುವಂತಹ ದಿನಗಳಲ್ಲಿ ಅವರ ಮನೆಗೆ ಅವರ ಅಭಿಮಾನಿಗಳಿಗೆ ಸರ್ಕಾರದವತಿಯಿಂದ ಸಚಿವರು ಅಲ್ಲಿಗೆ ಭೇಟಿ ಕೊಟ್ಟು ಈ ಒಂದು ಸಾಂತ್ವನವನ್ನು ಹೇಳಿ ಮುಂದೆ ಅವರ ನೆನಪು ಸದಾ ಚಿರಸ್ಥಾಯಿಯಾಗಿರುವಂತೆ ಪ್ರಯತ್ನ ಮಾಡುತ್ತೇವೆನ್ನುವಂತಹ ಭರವಸೆಯನ್ನು ಸರ್ಕಾರದಿಂದ ಕೊಡಬೇಕೆಂಬ ವಿನಂತಿಯನ್ನು ನಾನು ಮಾಡುತ್ತಿದ್ದೇನೆ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯಸಚಿವರು) : ಮಾನ್ಯ ಅಧ್ಯಕ್ಷರೆ, ಸಂಬಂಧಿಕರ ಜೊತೆಯಲ್ಲಿ ಮಾತನಾಡಿದೆ, ಶವಸಂಸ್ಕಾರವನ್ನು ಒಂದು ಗಂಟೆಗೆ ಮಾಡುತ್ತೇವೆ ಹಾಗೆಂದು ಹೇಳಿದರು. ನಮಗೆ ಅವರು ನಿಧನವಾಗಿರುವ ಬಗ್ಗೆ ಬೆಳಿಗ್ಗೆ ಗೊತ್ತಾಯಿತು. ಅವರು ರಾತ್ರಿ

ತೀರಿಕೊಂಡಿದ್ದಾರೆ, ಈಗತಾನೆ ಡಾ.ಯು.ಆರ್.ಅನಂತಮೂರ್ತಿಯವರು ಕೂಡ ಶವಸಂಸ್ಕಾರದಲ್ಲಿ ಪಾಲ್ಗೊಳ್ಳಲು ಆಗಲಿಲ್ಲ, ನಿಮ್ಮಲ್ಲಿ ಬಹಳಷ್ಟು ಕಾಲ ಪಾರ್ಥಿವ ಶರೀರವನ್ನು ಇಡುವುದಿಲ್ಲ. ಆದ್ದರಿಂದ ನಾವು ಒಂದು ಗಂಟೆಗೆ ಶವಸಂಸ್ಕಾರವನ್ನು ಮಾಡುತ್ತೇವೆ, ಆಗುವುದಿಲ್ಲವೆಂದು ಹೇಳಿದರು. ಹಾಗಾಗಿ ಅಲ್ಲಿಗೆ ನಾವು ಹೋಗುವುದಕ್ಕಾಗಲಿಲ್ಲ. ಅಲ್ಲಿಗೆ ಜಿಲ್ಲಾಧಿಕಾರಿಯವರು ಹೋಗಿದ್ದಾರೆ. ಸರ್ಕಾರದ ಪರವಾಗಿ ರೀತ್ ಇಟ್ಟಿದ್ದಾರೆ. ಗೌರವ ಸಲ್ಲಿಸಿದ್ದಾರೆ.

ಅಧ್ಯಕ್ಷರು: ದಿವಂಗತರಾದ ಶ್ರೀ ಕೆ.ವಿ.ಸುಬ್ಬಣ್ಣನವರಿಗೆ ಗೌರವ ಸೂಚಿಸುವ ಸಲುವಾಗಿ ಮಾನ್ಯ ಸದಸ್ಯರೆಲ್ಲರೂ ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೃತರ ಗೌರವಾರ್ಥ ಸದನದ ಎಲ್ಲಾ ಸದಸ್ಯರು ಎದ್ದುನಿಂತು ಒಂದು ನಿಮಿಷ ಮೌನವನ್ನಾಚರಿಸಿದರು)

ಅಧ್ಯಕ್ಷರು: ಈ ಸದನವು ಅಂಗೀಕರಿಸಿದ ಸಂತಾಪ ಸೂಚಕ ನಿರ್ಣಯವನ್ನು ಮೃತರ ಕುಟುಂಬ ವರ್ಗದವರಿಗೆ ಕಳುಹಿಸಿ ಕೊಡಲಾಗುವುದು. ಈಗ ಸದನವನ್ನು 3 ಗಂಟೆಗೆ ಸೇರುವಂತೆ ಮುಂದೂಡಲಾಗಿದೆ.

(ಸದನವು 2ಗಂಟೆ 1 ನಿಮಿಷಕ್ಕೆ ಮುಂದೂಡಲ್ಪಟ್ಟು, ಭೋಜನ ವಿರಾಮದ ನಂತರ ಮಧ್ಯಾಹ್ನ 3 ಗಂಟೆಗೆ ಸಮಾವೇಶಗೊಳ್ಳಲು ನಿಶ್ಚಯಿಸಿತು

(ಸದನವು ಮಧ್ಯಾಹ್ನ 3 ಗಂಟೆ 15 ನಿಮಿಷಕ್ಕೆ ಪುನ: ಸೇರಿತು, ಮಾನ್ಯ ಸಭಾಧ್ಯಕ್ಷರು(ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

5. ಅಧ್ಯಕ್ಷರ ಅಪ್ಪಣೆ ಮೇರೆಗೆ ಪ್ರಸ್ತಾಪಿಸಲಾದ ವಿಷಯ:

ವಿಷಯ: ವಿನಿವಿಂಕ್ ವಂಚನೆ ಪ್ರಕರಣದಲ್ಲಿ ರಾಜಕಾರಣಿಗಳು ಶಾಮೀಲಾಗಿದ್ದಾರೆ ಎನ್ನುವ ರೀತಿಯಲ್ಲಿ ಪತ್ರಿಕೆಗಳಲ್ಲಿ ಪ್ರಕಟವಾಗಿರುವ ಬಗ್ಗೆ.

ಶ್ರೀ ಜೆ.ವಿ. ಶ್ರೀರಾಮರೆಡ್ಡಿ: ಮಾನ್ಯ ಸಭಾಧ್ಯಕ್ಷರೆ, ವಿನಿವಿಂಕ್ ವಂಚನೆ ಪ್ರಕರಣಕ್ಕೆ ಸಂಬಂಧಿಸಿದಂತೆ ಪತ್ರಿಕೆಗಳಲ್ಲಿ ನಾನಾ ರೀತಿಯಲ್ಲಿ ಬರುತ್ತಿದೆ.

ಅಧ್ಯಕ್ಷರು: ಪತ್ರಿಕೆಗಳಲ್ಲಿ ಏನೇನೋ ಬರುತ್ತಲೇ ಇರುತ್ತವೆ.

ಶ್ರೀ ಕೆ. ಜಯಪ್ರಕಾಶ್ ಹೆಗಡೆ: ಈ ಬಗ್ಗೆ ಸದನದಲ್ಲಿ ಚರ್ಚೆಯಾಗಬೇಕೆಂದು ಬಯಸುತ್ತೇವೆ.

ಅಧ್ಯಕ್ಷರು: ಯಾವುದೇ ನೋಟೀಸ್ ಕೊಡದೆ ಚರ್ಚೆಯಾಗಬೇಕೆಂದರೆ ಹೇಗೆ ಹೇಳಿ? ನಿಯಮಾವಳಿ ಪ್ರಕಾರ ಇರುವ ವಿಷಯಗಳನ್ನು ಏನು ಮಾಡುವುದು?